ಪ್ರಸ್ತಾಪ ಮಾಡಿದ್ದೀರಿ. ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಏನು ವಿಷಯ ತಮ್ಮ ಹತ್ತಿರ ಇದ್ದರೂ ಬರೆದುಕಳುಹಿಸಿ. ಇನ್ನು ಈ ವಿಷಯವನ್ನು ಇಲ್ಲಗೇ ಮುಗಿಸೋಣ. 69ರ ನಿಯಮದ ಮೇರೆಗೆ ಪ್ರಮುಖವಾದ ವಿಷಯ ಇದೆ. ಈಗ ಸಾಕಷ್ಟು ಅವಕಾಶವನ್ನು ನಿಮಗೆ ಕೊಟ್ಟಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕನ್ಫೂಡ್ ಮಾಡಿಲ್ಲ.

ಉಪಾಧ್ಯಕ್ಷರು : ತಾವು ಒಂದೂಕಾಲು ಗಂಟೆ ಪ್ರಸ್ತಾಪ ಮಾಡಿದ್ದೀರಿ. ಇಲ್ಲಿಗೆ ಸಾಕು. ಮತ್ತೆ ಹೇಳತಕ್ಕದ್ದು ಅನಾವಶ್ಯಕ. ಇವತ್ತಿಗೆ ಚರ್ಚೆ ಮುಗಿಯಿತು. 69ರ ನಿಯಮದ ಪ್ರಕಾರ ಇನ್ನೊಂದು ವಿಷಯ ಪ್ರಸ್ತಾಪ ಮಾಡುವುದು ಇರುವುದರಿಂದ, ಸಮಯ ಇದ್ದರೆ ಅನಂತರ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮತ್ತೆ ಅವಕಾಶ ಕೊಡುತ್ತೀರಾ?

ಉಪಾಧ್ಯಕ್ಷರು : ಇವತ್ತು ಆಗುವುದಿಲ್ಲ, ನಾಳೆ ನೋಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಧನ್ಯವಾದ ಹೇಳುತ್ತೇನೆ. ನಾನು ಹೇಳಿರುವ ವಿಚಾರಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆಂದು ಹೇಳಿ, ನನಗೆ ಇಷ್ಟು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಇವತ್ತಿನ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಗಿಸಿ ನಾಳೆಗೆ ಅದನ್ನು ಮತ್ತೆ ಮುಂದುವರೆಸೋಣ. ಇವತ್ತು 69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಸ್ತಾವನೆಗಳನ್ನು ಕಳಿಸಿದ್ದಾರೆ. ಮೊದಲು ಸನ್ಯಾನ್ಯ ಯಡಿಯೂರಪ್ಪನವರು ಪ್ರಾರಂಭ ಮಾಡಬೇಕು ಅಥವಾ ರುಕ್ಮಯ್ಯ ಪೂಜಾರಿ ಅವರು, ಶಂಕರಲಿಂಗೇಗೌಡರು, ಅಥವಾ ಅರಗ ಜ್ಞಾನೇಂದ್ರ, ತಾವು ಪ್ರಾರಂಭ ಮಾಡುತ್ತೀರಾ. ಯು.ಬಿ. ಬಣಕಾರ್ ಹಾಗೂ ವಾಟಾಳ್ ನಾಗರಾಜ್‌ರವರ ಹೆಸರುಗಳೂ ಇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನ್ನ ಹೆಸರೂ ಇರಬೇಕು.

ಉಪಾಧ್ಯಕ್ಷರು : ಇದರಲ್ಲಿ 6 ಹೆಸರುಗಳು ಇವೆ. ಅದರಲ್ಲಿ ನಿಮ್ಮ ಹೆಸರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪಾರ್ಟಿಯವರೇ ಹೆಣ್ಣು ಮಕ್ಕಳನ್ನು ಬಿಟ್ಟು ಹೋಗುತ್ತಾರೆ ಎಂದರೆ ಲೆಕ್ಕ ಹಾಕಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ನೋಟೀಸ್ನಲ್ಲಿ ಹೆಸರು ಕಳಿಸಿದ್ದೇನೆ.

ನಿಯಮ 69ರ ಮೇರೆಗೆ

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದಾಗಿ ಜನರಿಗೆ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಯಾನ್ಯ ಉಪಾಧ್ಯಕ್ಷರೆ, 69ನೇ ನಿಯಮದ ಪ್ರಕಾರ ಇವೊತ್ತಿನ ದಿವಸ ರಾಜ್ಯದಲ್ಲಿ ವಿದ್ಯುತ್‌ಅಭಾವದಿಂದಾಗಿ ಜನರಿಗೆ ಉಂಟಾಗಿರುವ ತೊಂದರೆಯು ಸಾರ್ವಜನಿಕ ಮಹತ್ವದ ಜರೂರು ವಿಷಯವಾಗಿದೆ.

ಶ್ರೀ ಕೆ.ಎನ್. ನಾಗೇಗೌಡ : ಇದಕ್ಕೆ ನನ್ನ ಕ್ರಿಯಾಲೋಪವಿದೆ. ನಿಯಮ 69 ರಡಿ ಪ್ರಸ್ತಾಪ ಮಾಡಲು ಮಾನ್ಯ ಸದಸ್ಯರು ತಮಗೆ ಮೊದಲು ಕಳುಹಿಸಿರುವ ನೋಟೀಸಿನಲ್ಲಿ ಅವರು ಸಿಗ್ನೇಟರಿ ಇದ್ದಾರೆಯೇ?

ಉಪಾಧ್ಯಕ್ಷರು : ಅವರು ಬೇರೆ ಒಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ನೋಟೀಸ್ ಅನ್ನು ಮೊದಲೇ ವಿಧಾನಮಂಡಲದ ಕಾರ್ಯಾಲಯದಲ್ಲಿ ಕೊಟ್ಟಿದ್ದರೆ ಅದಕ್ಕೆ ನಾವು ಜವಾಬ್ದಾರರಲ್ಲ. That is the mistake of your legislature secretariat. ನಮಗೆ ಏನು ಸರ್ವಿಸ್ ಈ ಸದನಕ್ಕೆ ಕೊಟ್ಟಿರುತ್ತಾರೋ ಅದು ಸುಪ್ರೀಮ್. ಒಂದು ಸಲ ಸದನದ ಮುಂದೆ ಮಂಡಿಸಿದ ನಂತರ ಅದು ಸದನದ ಆಸ್ತಿಯಾಗುತ್ತದೆ. ಅದರಂತೆ ಸದನದ ಕಾರ್ಯಕಲಾಪ ನಡೆದುಕೊಂಡು ಹೋಗಬೇಕು.. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆಸಿಕೊಂಡು ಹೋಗಲು ಸಾಧ್ಯವಿಲ್ಲ. ನೀವು ಸದನದ ನಿಯಮಗಳನ್ನು ಉಲ್ಲಂಘಿಸುವ ಹಾಗಿದ್ದರೆ ಅದು ತಮಗೆ ಬಿಟ್ಟಿದ್ದುದು. ತಾವು ನಿಯಮಗಳನ್ನು ಉಲ್ಲಂಘಿಸಿ ಬೇಕಾದರೆ ರೂಲಿಂಗ್ ಕೊಡಿ.

ಶ್ರೀ ಹೆಚ್.ಎನ್. ನಂಜೇಗೌಡ : ತಾವು ಅಧ್ಯಕ್ಷ ಪೀಠಕ್ಕೆ ಇಕ್ಕಟ್ಟು ತರಬೇಡಿ. He is the supreme authority. He can suspend the connected rule. For the present, we can presume that he has suspended the rule and has allowed the Hon'ble Member.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರು ಸಹಿ ಮಾಡಿರತಕ್ಕ ಪತ್ರ, ವಿಧಾನ ಮಂಡಲದ ಕಾರ್ಯಾಲಯಕ್ಕೆ ಹೋಗಿದೆ. ಅದರಲ್ಲಿ ಸ್ಪಷ್ಟವಾಗಿದೆ. ಆದರೆ, ಮುದ್ರಣವಾಗಿ ಬರುವುದರಲ್ಲಿ ಏನೋ ತಪ್ಪಾಗಿದೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಅದನ್ನು ಕೇಳಲಿಲ್ಲ, ನಾನು ಉಪಾಧ್ಯಕ್ಷರ ಹಕ್ಕಿನ ಬಗ್ಗೆ ಪ್ರಶ್ನಿಸಲಿಲ್ಲ, ಸದನದ ನಿಯಮಾವಳಿ ಪ್ರಕಾರ ತಾವು ಅವಕಾಶ ಕೊಟ್ಟರೆ, ನಾಳೆ ನಮಗೂ ಸದನದಲ್ಲಿ ಕೇಳುವುದಕ್ಕೆ ಅವಕಾಶ ಸಿಗುತ್ತದೆ. ತಮ್ಮ ರೂಲಿಂಗ್ ಬೇಕು ಅಷ್ಟೆ, ಬೇರೇನೂ ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯರ ಬಗ್ಗೆ ಸ್ವಲ್ಪ ಕರುಣೆ ಇರಲಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮಗೆ ಯಾರ ಕರುಣೆಯೂ ಬೇಡ, ನಮ್ಮ ಹಕ್ಕನ್ನು ನಮಗೆ ಕೊಟ್ಟರೆ ಸಾಕು.

ಉಪಾಧ್ಯಕ್ಷರು : ಮಾನ್ಯ ನಾಗೇಗೌಡರೆ, ನನ್ನ ಬಳಿ ಇರುವ ನೋಟೀಸಿನಲ್ಲಿ ಅವರ ಹೆಸರೂ ಇದೆ, ಸಹಿಯೂ ಇದೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಆ ಅಂಶವನ್ನು ಕೇಳಲಿಲ್ಲ. ನಮ್ಮ ವಿಧಾನ ಮಂಡಲದ ಕಾರ್ಯಾಲಯದಲ್ಲಿ ಕೊಟ್ಟಿರುವ ನೋಟೀಸಿನಲ್ಲಿ ಸಿಗ್ನೇಚರ್ ಇರಬಹುದು. ಮೊದಲು ಏನು ನೋಟೀಸ್‌ನ್ನು ಕಳುಹಿಸಿರುತ್ತಾರೋ ಅದು ಹೌಸ್ ಪ್ರಾಪರ್ಟಿಯಾಗುತ್ತದೆ. ನಿಮಗೆ ಪರಮಾವಧಿಕಾರವಿರುವುದರಿಂದ ತಾವು ಸೂಪರ್‌ಸೀಡ್ ಮಾಡಿ ಪ್ರಸ್ತಾಪಿಸುವುದಕ್ಕೆ ಅವಕಾಶ ಮಾಡಿಕೊಡಬಹುದು. ಆದರೆ, ಅದೇ ರೀತಿ ಬೇರೆ ಸದಸ್ಯರು ಕೇಳಿದಾಗಲೂ ಅವಕಾಶ ಕೊಡಬೇಕಾಗುತ್ತದೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಬಹಳ ಮುಖ್ಯವಾದ ಒಂದು ವಿಷಯವನ್ನು ತಮ್ಮ ಮುಂದಿಡಲು ನಾನು ಇಚ್ಛಿಸುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಚುನಾವಣೆಯಾದ ನಂತರ ಇವೊತ್ತು

ಸಾರ್ವಜನಿಕರೇನಾದರೂ ಕಷ್ಟ ಅನುವಿಸುತ್ತಿದ್ದರೆ ಇದಕ್ಕೆ ಕಾರಣ ವಿದ್ಯುಚ್ಛಕ್ತಿ ಮಂಡಳಿಯವರು ಎಂದು ನಾನು ತಿಳಿದುಕೊಂಡಿದ್ದೇನೆ. ಬೆಳಕು ಮತ್ತು ನೀರು, ಇವು ಮನುಷ್ಯನಿಗೆ ಅಗತ್ಯವಾಗಿರುವ ವಸ್ತುಗಳು. ಇಡೀ ಕರ್ನಾಟಕದಲ್ಲಿ ಇವೊತ್ತು ವಿದ್ಯುಚ್ಛಕ್ತಿ ಮಂಡಳಿಯವರು ಕಣ್ಣುಮುಚ್ಚಲೆ ಆಟ ಆಡುತ್ತಿದ್ದಾರೆ. ಬೆಳಿಗ್ಗೆ ವಿದ್ಯುತ್ ಇದ್ದರೆ ಸಾಯಂಕಾಲ ಇರುವುದಿಲ್ಲ. ಈ ರೀತಿಯಾದ ಕಷ್ಟದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಈ ಪರಿಸ್ಥಿತಿ ರಾಜ್ಯದಲ್ಲಿ ಚುನಾವಣೆಯಾದ ನಂತರ ಬಂದಿರುವುದಕ್ಕೆ ಕಾರಣವೇನೆಂದರೆ ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆದರೆ, ನನಗೆ ತಿಳಿದಿರುವ ವಿಷಯದ ಪ್ರಕಾರ ಕರ್ನಾಟಕಕ್ಕೆ ರಾಮಗುಂಡಂನಿಂದ ಎಷ್ಟು ಪ್ರಮಾಣದ ವಿದ್ಯುಚ್ಛಕ್ತಿ ಬರಬೇಕಾಗಿತ್ತೋ, ಅಷ್ಟು ಪ್ರಮಾಣದಲ್ಲಿ ಬಂದಿಲ್ಲ. ಇದಕ್ಕೆ ಕಾರಣವೇನು? ಎಂಬುದರ ಕುರಿತು ಸಮಾಲೋಚಿಸಿದಾಗ ನನಗೆ ತಿಳಿದು ಬಂದ ವಿಷಯವನ್ನು ಇಲ್ಲಿರತಕ್ಕ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಪಡುತ್ತಿದ್ದೇನೆ.

ಕರ್ನಾಟಕಕ್ಕೆ ರಾಮಗುಂಡಂ ಸ್ಟೇಷನ್‌ನಿಂದ ಸುಮಾರು 630 ರಿಂದ 650 ಕಿಲೋ ವ್ಯಾಟ್‌ನಷ್ಟು ವಿದ್ಯುತ್ ಬರಬೇಕಾಗಿತ್ತು. ಆದರೆ, ಆಂಧ್ರಪ್ರದೇಶದಲ್ಲಿ ಸುಮಾರು ಆರು ತಿಂಗಳಿನಿಂದ ಎಲೆಕ್ಟ್ರಿಸಿಟಿ ಇನ್‌ಡಿಸಿಪ್ಲಿನ್ ಆಗಿ ತಮಗೆ ಬೇಕಾದಂತೆ ಉಪಯೋಗಿಸಿಕೊಂಡು ನಮ್ಮ ರಾಜ್ಯಕ್ಕೆ ನ್ಯಾಯಯುತವಾಗಿ ಸಲ್ಲಬೇಕಾದಂಥ ಎಲೆಕ್ಟ್ರಿಸಿಟಿಯನ್ನು ಸರಬರಾಜು ಮಾಡಿಲ್ಲ. ಇದಕ್ಕೆ ಕಾರಣವೇನು ಎನ್ನುವುದರ ಬಗ್ಗೆಯೂ ಕೂಡ ನಾವೆಲ್ಲೂ ಇವೊತ್ತು ಯೋಚಿಸಬೇಕಾಗಿದೆ. ಇದು ಲಘುವಾಗಿ ತೆಗೆದುಕೊಳ್ಳುವ ವಿಷಯವಲ್ಲ. ರಾಜ್ಯಕ್ಕೆ ಇದುವರೆವಿಗೂ 400 ಕಿಲೋ ವ್ಯಾಟ್‌ನಷ್ಟು ವಿದ್ಯುತ್ ಹರಿದು ಬರುತ್ತಿತ್ತು. ಆದರೆ, ಚುನಾವಣೆಯಾದ ನಂತರ ತಕ್ಷಣ ಅದು 300 ಕಿಲೋ ವ್ಯಾಟ್‌ಗಿಳಿದು ಅನಂತರ ಈಗ 285 ಕಿಲೋ ವ್ಯಾಟ್‌ನಷ್ಟು ವಿದ್ಯುತ್ ಟ್ರಾನ್ಸ್‌ಮಿಷನ್‌ನಲ್ಲಿ ರಾಮಗುಂಡಂನಿಂದ ಬರುತ್ತಿದೆ ಎನ್ನುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ನಾನು ಇದರ ಬಗ್ಗೆ ಆಸಕ್ತಿವಹಿಸಿ ತಿಳಿದುಕೊಂಡಾಗ ನನಗೆ ಕಂಡುಬಂದ ಅಂಶವೇನೆಂದರೆ ಆಂಧ್ರಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿ ನೂತನವಾಗಿ ಅಧಿಕಾರ ವಹಿಸಿಕೊಂಡ ಎನ್.ಟಿ. ರಾಮಾರಾವ್‌ರವರು ತಮ್ಮ ಮಂತ್ರಿಮಂಡಲ ರಚನೆ ಮಾಡಿದ ನಂತರ ಅಲ್ಲಿರುವ ನಾಗಾರ್ಜುನ ಸಾಗರದಿಂದ ಇಲ್ಲಿರುವ ಗ್ರಿಡ್‌ಗೆ ಅಂದರೆ ಕರ್ನಾಟಕಕ್ಕೆ ಬರತಕ್ಕಂಥ ಟ್ರಾನ್ಸ್‌ಮಿಷನ್ ಲೈನ್ ಈ ಒಂದು ನಾಗಾರ್ಜುನ ಸಾಗರದಿಂದ ಬರುತ್ತಿರತಕ್ಕಂಥ ಸಂದರ್ಭದಲ್ಲಿ ಆಂಧ್ರ ಪ್ರದೇಶದಲ್ಲಿರತಕ್ಕಂಥ ಐ.ಪಿ. ಸೆಟ್ಟುಗಳೇನಿವೆ ಅವುಗಳಿಗೆ ಬೇಕುಬೇಕಾದಗ ವಿದ್ಯುತ್‌ನ್ನು ಕೊಟ್ಟನಂತರ ಕರ್ನಾಟಕಕ್ಕೆ ನ್ಯಾಯವಾಗಿ, ನಿಜವಾಗಿ ನಮಗೆ ಏನು ವಿದ್ಯುತ್ ಬರಬೇಕಾಗಿತ್ತು ಅದನ್ನು ಅವರು ತಡೆ ಹಿಡಿದು,

ಕರ್ನಾಟಕಕ್ಕೆ ಬರುತ್ತಿರತಕ್ಕಂಥ ವಿದ್ಯುತ್‌ಚ್ಛಕ್ತಿ ಕಿಲೊವ್ಯಾಟ್‌ನಲ್ಲಿ ಕಡಿಮೆಯಾಗಿ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಜನರಿಗೂ ಸಹ ವಿದ್ಯುಚ್ಛಕ್ತಿಯ ಅಭಾವವಾಗಿರುವುದನ್ನು ತಾವೆಲ್ಲರೂ ಸಹ ನೋಡಿದ್ದೀರಿ. ಇದರ ಬಗ್ಗೆ ಚುನಾವಣೆಯಾಗಿ 15 ದಿನಗಳಾದರೂ ಸಹ ಸರ್ಕಾರದವರು ಗಮನ ಹರಿಸದೆ ಇರತಕ್ಕಂಥ ಸಂದರ್ಭದಲ್ಲಿ ಇಡೀ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ರೈತರು ಒಂದು ಕಡೆ ಸಾರ್ವಜನಿಕರು ಒಂದು ಕಡೆ, ಗೃಹನಿವಾಸಿಗಳು ಮತ್ತು ಎಲ್ಲಾದಕ್ಕಿಂತ ಹೆಚ್ಚಾಗಿ ಫವರನ್ನು ಉಪಯೋಗಿಸಿಕೊಂಡಿರತಕ್ಕಂಥ ದೊಡ್ಡ ದೊಡ್ಡ ಹೈಟೆನ್‌ಷನ್ ಫ್ಯಾಕ್ಟರಿಗಳು, ಸಣ್ಣ ಫ್ಯಾಕ್ಟರಿಗಳು, ಮತ್ತು ಪವರನ್ನು ಉಪಯೋಗಿಸಿ ಕೆಲಸ ಮಾಡುತ್ತಿದ್ದಂಥ ನೇಕಾರರಿಗೆ ಅಪಾರವಾದಂಥ ಅನ್ಯಾಯವಾಗಿದೆ, ನಷ್ಟವಾಗಿದೆ, ಇದನ್ನು ಯಾರು ಸರಿ ಪಡಿಸುತ್ತಾರೋ ನನಗೆ ಗೊತ್ತಿಲ್ಲ. ನಾನು ಇವತ್ತು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅಂದು ಶ್ರೀಮಾನ್ ರಾಜಶೇಖರಮೂರ್ತಿಯವರು ಇದೇ ವಿಚಾರವಾಗಿ ಮಾತನಾಡಬೇಕಾಗಿ ಬಂದಂಥ ಸಮಯದಲ್ಲಿ, ಇದರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಬಹಳ ಕೆಲಸವನ್ನು

ಮಾಡುತ್ತೇವೆಂದು 1989-90ರಲ್ಲಿ ಅಂದರೆ 21-12-90ನೇ ಇಸವಿಯಲ್ಲಿ ಇದೇ ಸದನದಲ್ಲಿ ಮಾತನಾಡುತ್ತ ಏನು ಹೇಳಿದರೆಂದರೆ, ಕಾಳಿ ಎರಡನೆ ಹಂತದಲ್ಲಿ 270 ಮೆ. ವ್ಯಾಟ್‌ಶರಾವತಿ ಎರಡನೆ ಹಂತದಲ್ಲಿ 240 ಮೆ.ವ್ಯಾಟ್, ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ 420 ಮೆ.ವ್ಯಾಟ್. ವಾರಾಹಿನಲ್ಲಿ 115 ಮೆಗಾವ್ಯಾಟ್ ಅಂದರೆ ಒಟ್ಟು 1045 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ನಾವು ಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಈ ಸದನಕ್ಕೆ ಆಶ್ವಾಸನೆಯನ್ನು ಕೊಟ್ಟರು. ಆದರೆ ಇದುವರೆಗೂ ಸಹ ಅದು ಕಾರ್ಯಗತವಾಗಿಲ್ಲ. ಇದರ ಜೊತೆಗೆ ಕೈಗಾದಲ್ಲಿ ಮತ್ತು ಮಂಗಳೂರಿನಲ್ಲಿ 2420 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿ, ಈ ವಿದ್ಯುತ್ ಸಮಸ್ಯೆಯನ್ನು ತೊಡೆದು ಹಾಕುತ್ತೇವೆಂದು ಹೇಳಿದ್ದರು. ಆದರೆ ಐದು ವರ್ಷಗಳು ಕಳೆದುಹೋದರೂ ಸಹ ವಿದ್ಯುಚ್ಛಕ್ತಿಯ ಈ ಪರಿಸ್ಥಿತಿ ಇದೇ ರೀತಿ ಇದೆ. ಯಾವುದೇ ವಿಧವಾದ ಉದ್ಧಾರವಂತೂ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯ ಬಗ್ಗೆ ಅಥವಾ ಅದರ ಸರಬರಾಜಿನ ಬಗ್ಗೆ ಆಗಿಲ್ಲ.

ಮಾನ್ಯ ಅಧ್ಯಕ್ಷರೇ, ಈ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ A State which is not self-sufficient in power cannot prosper.

ಇದು ಎಲ್ಲರಿಗೂ ತಿಳಿದಿರತಕ್ಕಂಥ ವಿಷಯ. ಇಪ್ಪತ್ತು ವರ್ಷಗಳಾದರೂ ನಮ್ಮಲ್ಲಿ ಇದ್ದಂಥ ಹಿಂದಿನ ಮುಖ್ಯಮಂತ್ರಿಗಳಲ್ಲಿ ಯಾರೊಬ್ಬರೂ ಸಹ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸದೆ, ಅದಕ್ಕೆ ಬೇಕಾದಂಥ ಹಣವನ್ನು ಒದಗಿಸದೆ ಇರತಕ್ಕ ಸಂದರ್ಭದಿಂದ ಇವತ್ತಿನ ದಿವಸ ನಾವು ಈ ಪರಿಸ್ಥಿತಿಗೆ ಕಾಲಿಟ್ಟಿದ್ದೇವೆ. ಇನ್ನು ರಾಯಚೂರು ಥರ್ಮಲ್ ಪ್ಲಾಂಟಿನ್ ಬಗ್ಗೆ ಹೇಳವುದಾದರೆ, ಅವರು ನಮ್ಮಲ್ಲಿ ಒಂದು ಪ್ಲಾಂಟ್‌ನ್ನು ಕೆಲಸ ಮಾಡುತ್ತಿಲ್ಲವೆಂದು ನಿಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಈ ಒಂದು ಥರ್ಮಲ್ ಪ್ಲಾಂಟ್‌ನಲ್ಲಿ ವಿದ್ಯುಚ್ಛಕ್ತಿ ಅಭಾವ ಅಥವಾ ತಾಂತ್ರಿಕ ಹಿನ್ನಡೆಯಿಂದಾಗಿ, ವೈಫಲ್ಯದಿಂದಾಗಿ ಈ ವರ್ಷ ಅದು ಮುಗಿದಿಲ್ಲ ಅಥವಾ ಆ ಪ್ಲಾಂಟ್ ನಿಂತಿಲ್ಲ. ಆದರೆ, ನನಗೆ ತಿಳಿದಮಟ್ಟಿಗೆ ಕೋಲ್ ಇಂಡಿಯಾಕ್ಕೆ ಕೋಲನ್ನ ಸರಬರಾಜು ಮಾಡಿರುವುದಕ್ಕೆ ಕೊಡಬೇಕಾಗಿರತಕ್ಕ ಹಣವನ್ನು ಕರ್ನಾಟಕ ಸರ್ಕಾರ ಪಾವತಿ ಮಾಡದೆ ಇರತಕ್ಕ ಸಮಯದಲ್ಲಿ ರಾಯಚೂರು ಥರ್ಮಲ್ ಪ್ಲಾಂಟ್ ನಿಂತಿದೆ. ಇದನ್ನು ತೆರೆಯುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇದು ನಿಜವೆ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ? ಆ ರೀತಿ ಥರ್ಮಲ್ ಪ್ಲಾಂಟ್ ನಿಂತಿದ್ದರೆ ಅದಕ್ಕೆ ಕಾರಣವೇನ? ಇದಕ್ಕೆ ಆಗಿರತಕ್ಕಂಥ ತಾಂತ್ರಿಕ ವೈಫಲ್ಯವೇನು? ಕೋಲ್ ಇಂಡಿಯಾಕ್ಕೆ ಕೊಡಬೇಕಾಗಿರತಕ್ಕ ಹಣವನ್ನು ತಾವ ಏತಕ್ಕೆ ಕೊಟ್ಟಿಲ್ಲ? ಆ ರೀತಿ ಹಣವನ್ನು ಕೊಡದೆ ಇರತಕ್ಕ ಸಮಯದಲ್ಲಿ ಇಲ್ಲಿ ಆಗತಕ್ಕ ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದನೆ ನಿಂತ, ಸಾರ್ವಜನಿಕರಿಗೆ ಅನಾನಕೂಲವಾಗಿರುವುದರ ಬಗ್ಗೆ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಸಮಜಾಯಿಷಿಯನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಸಹ ಮಾನ್ಯ ಮಂತ್ರಿಗಳು ತಿಳಿಸಬೇಕಾಗುತ್ತದೆ.

(ಮಾನ್ಯ ಕೆ.ಎಸ್. ನಾಗೇಗೌಡರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಮತ್ತೊಂದು ವಿಚಾರವನ್ನು ಶ್ರೀಮಾನ್ ರಾಜಶೇಖರಮೂರ್ತಿಯವರು ಆಗ ಈ ವಿಧಾನಮಂಡಲದಲ್ಲಿ ಹೇಳಿದರು. ಅದೇನೆಂದರೆ, ಟ್ರಾನ್ಸ್‌ಮಿಷನ ಲೈನ್ಸ್‌ಗಳೇನಿದೆ ಅದು ಸರಿಯಾಗಿಲ್ಲ, ಅವುಗಳನ್ನು ಬಲಪಡಿಸಬೇಕಾಗುತ್ತದೆ ಎಂದು. ರಾಯಚೂರಿನಿಂದ ರಾಮಗೊಂಡಂನಿಂದ ಬರತಕ್ಕಂಥ ಈ ಲೈನ್ಸ್‌ಗಳನ್ನೆಲ್ಲಾ ಭದ್ರವಾಗಿ ಮಾಡುತ್ತೇವೆ ಎನ್ನತಕ್ಕ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಐದು ವರ್ಷಗಳಾದರೂ ಸಹ ಆ

ಟ್ರಾನ್ಸ್‌ಮಿಷನ್ ಲೈನ್‌ಗಳು ಹಾಗೆಯೇ ಉಳಿದಿದೆ. ಅದರ ಪರಿಣಾಮವಾಗಿ ರಾಮಗೊಂಡಂ ಮತ್ತು ಇತರ ಕೇಂದ್ರಗಳಿಂದ ಬರುತ್ತಿತಕ್ಕಂಥ ವಿದ್ಯುತ್‌ನ ಗುಣಮಟ್ಟ ಕಳಪೆಯಾಗಿ ಬಂದು ಇವತ್ತು ಓಲ್ಟೇಜ್ ಡ್ರಾಫ್‌ನ್ನು ಇಡೀ ರಾಜ್ಯದಲ್ಲಿ ನಾವು ಅನುಭವಿಸುತ್ತಿದ್ದೇವೆ. ಇದರಿಂದ ಇವತ್ತು ಎಷ್ಟೋ ಜನರ ಮನೆಗಳಲ್ಲಿ ಅವರು ಇಟ್ಟುಕೊಂಡಿರತಕ್ಕಂಥ ಟಿ.ವಿ.ಗಳು ಇತರೆ ವಸ್ತುಗಳು ಹಾಳಾಗಿದೆ, ಅವರು ಏನು ವಸ್ತುವನ್ನು ನೋಡಲು ಇಟ್ಟುಕೊಂಡಿದ್ದರೋ ಅದನ್ನು ನೋಡಲೂ ಸಹ ಅವರಿಗೆ ಅವಕಾಶ ಕೂಡ ಒದಗಿಲ್ಲ, ಈ ಪರಿಸ್ಥಿತಿ ತಮಗೂ ಸಹ ಗೊತ್ತಿದೆ. ಇಡೀ ರಾಜ್ಯದಲ್ಲಿ ಎಷ್ಟು ಪಂಪುಸೆಟ್ಟುಗಳನ್ನು ತಾವು ಹಾಕಿದ್ದೀರಿ? ಎಷ್ಟು ಪಂಪುಸೆಟ್ಟುಗಳಿಗೆ ಸಂಪರ್ಕವನ್ನು ಕೊಡತಕ್ಕಂಥ ಸಮಯದಲ್ಲಿ ಆ ಪಂಪುಸೆಟ್ಟುಗಳು ಕೆಲಸ ಮಾಡುತ್ತಿವೆಯೆ ಅಥವಾ ಇಲ್ಲವೆ ಎಂಬುದನ್ನು ನೋಡಿದ್ದೀರಾ? ಒಂದು ವೇಳೆ ಕೆಲಸ ಮಾಡುತ್ತಿರದಿದ್ದರೆ ಅದರ ಬಗ್ಗೆ ಏನು ಕ್ರಮವನ್ನು ತೆಗೆದಕೊಂಡಿದ್ದೀರಿಯ ಇದರ ಬಗ್ಗೆ ನನಗೆ ಮಂತ್ರಿಗಳಿಂದ ಉತ್ತರಬೇಕಾಗಿದೆ. ನೀರಿನ ಸರಬರಾಜ ಆಗಬೇಕಾದರೆ ವಿದ್ಯುಚ್ಛಕ್ತಿ ಅತ್ಯಂತ ಮುಖ್ಯ, ವಾರಾಹಿ ಯೋಜನೆ, ಕಾಳಿ ಯೋಜನೆ, ತೊರೆಕಾಡನಹಳ್ಳಿ ಮುಂತಾದ ಜಾಗಗಳಲ್ಲಿ ನೀರಿನ ಯೋಜನೆ ಹಾಕಿಕೊಂಡಿದ್ದೀರಿ. ಇದರ ಬಗ್ಗೆ ತಾವು ಏನು ಮಾಡಿದ್ದೀರಿ?

7.25 ಪಿ.ಎಂ.

ಇಲ್ಲಿ ಕೆಪ್ಯಾಸಿಟರ್ಸ್, ಬೂಸ್ಟರ್ಸ್ ಹಾಕುತ್ತೇವೆಂದು ಆಗಿನ ಮಂತ್ರಿಗಳು ಹೇಳಿದ್ದರು. ಇಲ್ಲಿ ಕೆಪ್ಯಾಸಿಟರ್ಸ್ ಹಾಕಿ ಜನರಿಗೆ ನುಕೂಲ ಮಾಡಿ ಕೊಡುವುದಕ್ಕೋಸ್ಕರ ಮತ್ತು ನೀರು ಸರಬರಾಜು ಮಾಡುವುದಕ್ಕೆ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಅವೊತ್ತು ಹೇಳಿದ್ದರು. ಆ ಕೆಲಸ ಇವೊತ್ತಿನವರೆವಿಗೂ ಆಗಿಲ್ಲ, ಯಾವುದ ಕೆಪ್ಯಾಸಿಟರ್ಸ್ ಹಾಕಿಲ್ಲ, ಜನರೇಟೇಂಗ್ ಸ್ಟೇಷನ್‌ಗಳನ್ನು ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ಹಾಕಿಕೊಂಡಿದ್ದಾರೆ. ಆದರೆ, ಕರ್ನಾಟಕದಲ್ಲಿರುವ ಬೆಂಗಳೂರಿನಲ್ಲಿ ತಾವು ಒಂದೇ ಒಂದು ಜನರೇಟಿಂಗ್ ಸ್ಟೇಷನ್ ಹಾಕಿಲ್ಲ, ಇದರ ಪರಿಣಾಮವಾಗಿ ಬೆಂಗಳೂರು ನಗರದ ನಾಗರಿಕರು ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿರುವ ಜನರಿಗೂ ಇದರಿಂದ ಇವೊತ್ತು ಅನಾನುಕೂಲವಾಗಿರುವುದನ್ನು ತಾವು ನೋಡುತ್ತಿದ್ದೀರಿ. ಹೀಗಾಗಿರುವುದಕ್ಕೆ ಕಾರಣವೇನು ಎಂಬುದನ್ನು ಯೋಚನೆ ಮಾಡಬೇಕಾಗಿದೆ ಮತ್ತು ಆ ದಿಸೆಯಲ್ಲಿ ತಾವು ಕಾರ್ಯತತ್ಪರರಾಗಬೇಕಾಗಿದೆ.

ಎಲೆಕ್ಟ್ರಿಸಿಟಿ ಗ್ರಿಡ್ ಏನಿದೆ, ಅದರ ವ್ಯಾಪ್ತಿಯೊಳಗೆ ತಮಿಳುನಾಡು, ಮದ್ರಾಸ್, ಕೇರಳ, ಪಾಂಡಿಚೇರಿ ಮತ್ತು ಆಂಧ್ರಪ್ರದೇಶಗಳು ಬರುತ್ತದೆ. ಆದರೆ, ಇವೊತ್ತು ಕೇವಲ ಆಂಧ್ರಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವ ಕಾರಣ ಉಳಿದ ನಾಲ್ಕು ಪ್ರದೇಶಗಳಾ, ಮದ್ರಾಸ್, ತಮಿಳುನಾಡು, ಕೇರಳ ಮತ್ತು ಕರ್ನಾಟಕ ನಾಹುತಕ್ಕೊಳಗಾಗಿವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಕುರಿತು ಏನಾದರೂ ಮಾತನಾಡಿದ್ದೀರಾ? ಇದರ ಬಗ್ಗೆಯೂ ಯೋಚಿಸಬೇಕಾಗುತ್ತದೆ. ದಿನವೂ ಬೆಳಗ್ಗೆ ಪತ್ರಿಕೆ ಓದುತ್ತಿದ್ದೇವೆ, ಅದರಲ್ಲಿ ನೆರೆ ರಾಜ್ಯದ ಮುಖ್ಯಮಂತ್ರಿಯಾಗಿರುವ ಎನ್.ಟಿ. ರಾಮರಾವ್‌ರವರು ನ್ಯಾಷನಲ್ ಫ್ರಂಟ್ ಮಾಡುತ್ತಾರೆನ್ನುವ ಸುದ್ದಿ ಕೇಳುತ್ತಿದ್ದೇವೆ. ತಾವೇನಾದರೂ ಅವರ ಮಾತಿಗೆ ಮರುಳಾಗಿ ಕರ್ನಾಟಕವನ್ನು ಬಲಿಪಶುವನ್ನಾಗಿ ಮಾಡುವುದಕ್ಕೆ ಹೋಗಬೇಡಿ. ತಾವು ನ್ಯಾಶನಲ್ ಫ್ರಂಟ್‌ಗಾದರೂ ಸೇರಿ. ಇಲ್ಲವೇ ಯಾವುದಕ್ಕಾದರೂ ಸೇರಿ. ಆದರೆ, ವಿದ್ಯುಚ್ಛಕ್ತಿ ಪಡೆಯುವಲ್ಲಿ ಮಾಡಿಕೊಡಬೇಕು ಮತ್ತು ಅದೇ ರೀತಿ ನೀರಿನ ಸೌಲಭ್ಯವೊದಗಿಸಿಕೊಡುವಲ್ಲಿ ತಮಿಳುನಾಡು ಜೊತೆ ಹೋಗುವ ಸಂದರ್ಭದಲ್ಲಿ ರಾಜ್ಯಕ್ಕೆ ಅನಾನುಕೂಲವಾಗದ ರೀತಿಯಲ್ಲಿ ತಾವು ಕೆಲಸ ಮಾಡಬೇಕು ಮತ್ತು ಅದೇ ರೀತಿ ನೀರಿನ ಸೌಲಭ್ಯವೊದಗಿಸಿ ಕೊಡುವಲ್ಲಿ ತಮಿಳುನಾಡು ಜೊತೆ ಹೋಗುವ ಸಂದರ್ಭದಲ್ಲಿ ರಾಜ್ಯಕ್ಕೆ ಅನಾನುಕೂಲವಾಗದ ರೀತಿಯಲ್ಲಿ ತಾವು

ಕೆಲಸ ಮಾಡಬೇಕು. ಹಾಗಾದಾಗ ಮಾತ್ರ ಕರ್ನಾಟಕ ಉಳಿಯುತ್ತದೆ, ಕರ್ನಾಟಕ ಬೆಳೆಯುತ್ತದೆ. ಜೊತೆಗೆ ಕರ್ನಾಟಕದ ಜನರೂ ಬೆಳೆಯುತ್ತಾರೆ, ತಮ್ಮನ್ನೂ ಮೆಚ್ಚುತ್ತಾರೆ. ಈ ಕೆಲಸ ತಾವು ಮಾಡಬೇಕು. ಇನ್ನು ಸರ್ಕಾರದ ಪರವಾಗಿ ರಾಜ್ಯಪಾಲರ ತಮ್ಮ ಭಾಷಣದಲ್ಲಿ ವಿದ್ಯುಚ್ಛಕ್ತಿಗೆ ಆದ್ಯತೆ ಕೊಡತ್ತೇವೆ ಎಂದ ಹೇಳಿದ್ದಾರೆ. ಆದರೆ, ಯಾವ ರೀತಿಯ ಆದ್ಯತೆ ಕೊಡಲಾಗುವುದೆಂಬುದರ ಬಗ್ಗೆ ಎಲ್ಲಿಯೂ ಹೇಳಿಲ್ಲ. ಇದರ ಬಗ್ಗೆ ತಾವು ಹೇಳಬೇಕಾಗುತ್ತದೆ. ನೀವು ಕೊಡಲಾಗುವುದೆಂಬುದರ ಬಗ್ಗೆ ಎಲ್ಲಿಯೂ ಹೇಳಿಲ್ಲ. ಇದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ನೀವು ವಿದ್ಯುಚ್ಛಕ್ತಿಗೆ ಆದ್ಯತೆ ಕೊಡುವುದಾದರೆ ವಿದ್ಯುಚ್ಛಕ್ತಿ ಸರಬರಾಜಿನ ಗುಣಮಟ್ಟ ಹಾಗೂ ಪ್ರಮಾಣವನ್ನು ಹೆಚ್ಚಿನಬೇಕಾದರೆ ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಸಾರ್ವಜನಿಕರಿಗೆ ಆಗಿರತಕ್ಕ ಅನಾನುಕೂಲಗಳನ್ನು ದೂರ ಮಾಡುವುದಕ್ಕೆ ಯಾವ್ಯಾವ ಪ್ರಯತ್ನಗಳನ್ನು ಮಾಡಿದ್ದೀರಿ? ಇದನ್ನು ನಾವೆಲ್ಲರೂ ಕೇಳತಕ್ಕಂಥ ಹಕ್ಕೆ ಇದೆ. ಏಕೆಂದರೆ, ಪ್ರತಿಯೊಬ್ಬ ನಾಗರಿಕನಿಗೂ ಬೇಕಾದಂಥ ವಿದ್ಯುತ್‌ನಲ್ಲಿ ಅಭಾವವುಂಟಾದಲ್ಲಿ ಉತ್ಪತ್ತಿ ನಿಲ್ಲುತ್ತದೆ, ಉತ್ಪತ್ತಿ ನಿಂತರೆ ದೇಶದ ಕಾಸ್ಟ್ ಆಫ್ ಇನ್‌ಕಮ್ ಏನಿದೆ ಮತ್ತು ಅದರ ಇಂಡೆಕ್ಸ್ ಏನಿದೆ ಅದು ಕಡಿಮೆಯಾಗುತ್ತದೆ ಮತ್ತು ಇದರ ಪರಿಣಾಮ ಕ್ರಮೇಣ ಎಲ್ಲಾ ಕ್ಷೇತ್ರಗಳ ಮೇಲೆ ಉಂಟಾಗುತ್ತದೆ. ಈ ಕಾರಣಗಳಿಂದಾಗಿ ನಾನು ಇವೊತ್ತು ಮಂತ್ರಿಗಳನ್ನು ಕೇಳುತ್ತಿರುವುದೇನೆಂದರೆ, ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಇನ್ನು ಹೈ ವೋಲ್ಟೇಜ್ ಸಬ್ ಸ್ಟೇಷನ್‌ಗಳನ್ನು ಹಾಕುವುದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಈ ಹೈಟೆಷನ್ ಮತ್ತ ಲೋ ಟೆಕ್ಷನ್ ಫ್ಯಾಕ್ಟರಿಗಳಿಗೆ ಎಷ್ಟ ವಿದ್ಯುತ್ ಕಟ್ ಮಾಡುತ್ತೀರಿ? ಯಾವ ಸಮಯದಲ್ಲಿ ಕಟ್ ಮಾಡತ್ತೀರಿ? ಎಂಬುದನ್ನು ತಿಳಿಸಬೇಕಾಗುತ್ತದೆ. ಹೈಟೆನ್‌ಷನ್ ವಿದ್ಯುತ್ ಸೌಲಭ್ಯ ಕೊಡುತ್ತಿರುವವರಿಗೆ ಕಡತ ಮಾಡತಕ್ಕಂಥಾದ್ದ ಎಷ್ಟು? ಮತ್ತು ಕಡಿಮೆಯಾಗುವುದೆಷ್ಟು? ನನಗೆ ತಿಳಿದಿರುವ ಪ್ರಕಾರ 6 ಎಂ.ಜಿ.ಯಷ್ಟು ವಿದ್ಯುತ್ ಅನ್ನು ಈಗಾಗಲೇ ಯಲಹಂಕದಲ್ಲಿರುವ ವೀಲ್ ಅಂಡ್ ಆಯಕ್ಷನ್ ಯೂನಿಟ್‌ಗೆ ಕೊಡುತ್ತಿದ್ದಾರಾ. ಏತಕ್ಕೋಸ್ಕರ ಕೊಡುತ್ತಿದ್ದೀರಿ? ಸಾರ್ವಜನಿಕರಿಗೆ ಇಷ್ಟು ವಿದ್ಯುತ್ ಅಭಾವದಿಂದ ಇಷ್ಟು ಅನಾನುಕೂಲವುಂಟಾಗಿರುವ ಸಂದರ್ಭದಲ್ಲಿ ಅಷ್ಟು ಪ್ರಮಾಣದ ವಿದ್ಯುತ್ ಸೌಲಭ್ಯವನ್ನು ಕೊಡುವುದಕ್ಕೆ ಏತಕ್ಕೆ ಒಪ್ಪಿಕೊಂಡಿದ್ದೀರಿ? ಇದಕ್ಕೆ ಸಾರ್ವಜನಿಕರನ್ನು ಬಲಿ ಮಾಡಿ ಅವರಿಗೆ ವಿದ್ಯುತ್ ಸೌಲಭ್ಯ ಕೊಡುವ ಅಗತ್ಯವಿದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ.

ಅದೇ ರೀತಿ ಹೊಸೂರಿಗೆ ಅಂದರೆ ತಮಿಳುನಾಡಿಗೆ ಇಲ್ಲಿಂದ ವಿದ್ಯುತ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಇದರ ಅವಶ್ಯಕತೆ ಇದೆಯೇ? 'ಮನೆ ಗೆದ್ದು ಊರು ಗೆಲ್ಲು' ಎಂಬ ಗಾದೆಯಂತೆ ಮೊದಲು ನಾವು ನಮ್ಮ ಮನೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯದ ನಾಗರೀಕರನ್ನು ಮೊದಲು ನಾವು ರಕ್ಷಿಸಬೇಕಾಗಾತ್ತದೆ. ನಮ್ಮಲ್ಲಿರತಕ್ಕಂಥ ಗೃಹ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು, ದೊಡ್ಡ ಕೈಗಾರಿಕೆಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ ಮತ್ತು ಪಂಪುಸೆಟ್ಟುಗುಳಿಗೆ ವಿದ್ಯುತ್ ಸೌಕರ್ಯವೊದಗಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಅನಾವಶ್ಯಕವಾಗಿ ವಿದ್ಯುತ್ ಅನ್ನು ಬೇರೆ ಕಡೆಗೆ ಕೊಟ್ಟು ನಮ್ಮ ರಾಜ್ಯದ ಜನತೆಗಾಗಿರುವ ಅನ್ಯಾಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಇದರ ಬಗ್ಗೆ ತಾವು ದೀರ್ಘಾಲೋಚನೆ ಮಾಡಿ ಈ ದಿಸೆಯಲ್ಲಿ ಅಗತ್ಯವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ನಿಯಮ 69ರ ಪ್ರಕಾರ ಸದರಿ ವಿಷಯದ ಮೇಲಿನ ಚರ್ಚೆ ಒಂದು ಗಂಟೆಗೆ ಸೀಮಿತವಾಗಿದ್ದು, ಮಾನ್ಯ ಸದಸ್ಯರು 22 ನಿಮಿಷ ಮಾತನಾಡಿದ್ದಾರೆ. ಉಳಿದಿರತಕ್ಕಂಥ ಮೂರು ಮಾನ್ಯ ಸದಸ್ಯರುಗಳು ಸಮಯವನ್ನು ಹಂಚಕೊಳ್ಳಬೇಕು. ನಂತರ ಕೊನೆಯಲ್ಲಿ ಸಚಿವರು ಉತ್ತರ ಕೊಡುತ್ತಾರೆ. ನಿಯಮಾವಳಿ ಪ್ರಕಾರವೇ ಹೋಗಬೇಕು. ನಿಯಮ 69ರ ಪ್ರಕಾರ ಚರ್ಚೆ ಒಂದು ಗಂಟೆ ಮಾತ್ರ. ಚರ್ಚೆ ಒಂದು ಗಂಟೆಗೆ ಮುಗಿಯಲೇಬೇಕು. ಇದು ಸದನದ ನಿಯಮಾವಳಿ, ನಾವೇ ಹಾಕಕೊಂಡಿರತಕ್ಕಂಥ ನಿಯಮಾವಳಿ, ಇದನ್ನು ಬೇರೆ ಯಾರೂ ಹಾಕಿಲ್ಲ.

+ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಸಭಾಧ್ಯಕ್ಷರೆ, ನಮ್ಮ ಕರ್ನಾಟಕವನ್ನು ಬಿ.ಎಂ.ಶ್ರೀ. ರವರು ಹೇಳಿದ್ದಾರೆ. ಭಾರತದ ಹಿರಿಯ ಮಗಳು ಎಂದು. ಈ ಹಿರಿಯ ಮಗಳ ಸಂಪತ್ತನ್ನೆಲ್ಲಾ ಈಗಾಗಲೇ ಮಾರಾಟ ಮಾಡಲಾಗಿದೆ ಈಗ ಏನೂ ಉಳಿದಿಲ್ಲ. ಆ ಸಂಪತ್ತಿಗೆ ಕೊನೆಗೆ ಇರುವುದು ಒಂದೇ ಒಂದು. ಅದೇ ಆಪತ್ತು. ಆ ಆಪತ್ತಿಗೆ ಸಿಕ್ಕಿರತಕ್ಕಂಥ, ಈ ಕರ್ನಾಟಕಕ್ಕೆ ಬರಬೇಕಾಗಿರತಕ್ಕಂಥ ಜಲ ಮತ್ತು ವಿದ್ಯುತ್‌ನ್ನು ನಾವು ಪರಬಾರೆ ಮಾಡಿ, ನಮ್ಮ ರಾಜ್ಯದ ಜನಕ್ಕೆ ತೊಂದರೆ ಕೊಟ್ಟು, ನಮ್ಮ ರಾಜ್ಯದಲ್ಲಿರತಕ್ಕಂಥ ಹಲವಾರು ಕೈಗಾರಿಕೆಗಳು ಇವತ್ತು ಸ್ಥಗಿತಗೊಂಡಿವೆ. ಇವತ್ತು ಒಬ್ಬ ಬಡವ ಲೈಟ್ ತೆಗೆದುಕೊಳ್ಳಬೇಕಾದರೆ, ಕೆಪಾಸಿಟಿ ಇದ್ದರೂ ಕೂಡ ಲಂಚ ಕೊಟ್ಟು ಪಡೆಯಬೇಕಾದಂತಹ ಪರಿಸ್ಥಿತಿ ಕೂಡ ಇದೆ. ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮೈಸೂರಿನಲ್ಲಿ ಒಬ್ಬರು ಪುಟ್ಟತಾಯಮ್ಮ ಎಂದು ಸರ್ವೇ ನಂ 224, ಐಪಿ ನಂ. 607 ಅವಳು ಅಪ್ಲಿಕೇಷನ್ ಕೊಟ್ಟು ಹತ್ತು ತಿಂಗಳಾಯಿತು. ಒಂದು 250 ಕಿಲೋವ್ಯಾಟ್ ಟ್ರಾನ್ಸ್‌ಫಾರ್ಮ್ ಹಾಕಿಸಬೇಕಾದರೆ ಅವಳು ತನ್ನ ಮಾಂಗಲ್ಯವನ್ನು ಮಾರಿ ಕೊಟ್ಟಿದ್ದಾಳೆ. ಅದನ್ನು ಹಾಕಿಸಬೇಕಾದರೆ ಕೂಡ ಕೆಲವು ಅಧಿಕಾರಿಗಳು ತಮ್ಮ ಸ್ವಂತಕ್ಕೋಸ್ಕರ ಅದನ್ನು ಈ ರೀತಿ ಬಚ್ಚಿಟ್ಟಿದ್ದಾರೆ. ಮತ್ತು ಆಂಧ್ರ ಪ್ರದೇಶಕ್ಕೆ ಏಳು ಸಾವಿರ ಮಿಲಿಯನ್ ಯುನಟ್ over and above its entitlement. Thus slashing the share of other States.." ಎಂದು ಇದೆ. ಇನ್ನಿರಾಯ ಅವರು ಹೇಳಿದ್ದಾರೆ. "Lo : Shedding KEB Chief Blames A.P." ಆಂಧ್ರಪ್ರದೇಶವನ್ನು ಬ್ಲೇಮ್ ಮಾಡಬೇಕಾದಂತಹ ಅವಶ್ಯಕತೆ ಏನು ಇತ್ತು? ನಮ್ಮಲ್ಲಿರತಕ್ಕಂಥ ಸಂಪತ್ತನ್ನು ಬೇರೆಯವರಿಗೆ ಕೊಟ್ಟು ಜಗತ್ತಿನ ದಿವಸ ಒಬ್ಬ ರೈತ ಒಂದು ಮೋಟಾರನ್ನು.

ಶ್ರೀ ಜೆ.ಹೆಚ್. ಪಟೇಲ್ : ಇದು ಇಡೀ ದಿನ ಚರ್ಚೆಯಾಗಬೇಕಾದಂತಹ ವಿಷಯ. ಒಂದು ಗಂಟೆ ಅಲ್ಲ. ಇದಕ್ಕೆ ಡಿಬೇಟ್ ಇನಿಷಿಯೇಟ್ ಮಾಡಿದಂತಹ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಅರ್ಧ ಉತ್ತರ ಅವರೇ ಹೇಳಿಬಿಟ್ಟರು. ಅಲ್ಲಿಂದ ಬರುವ ಟ್ರಾನ್ಸ್‌ಮಿಷನ್ ಲೈನ್ ಕೆಟ್ಟುಹೋಗಿದೆ; ಅದಕ್ಕೋಸ್ಕರ ವೊಲ್ಟೇಜ್ ಡ್ರಾಪ್ ಆಗಿದೆ ಎಂದು ನೀವೇ ಪ್ರಶ್ನೆ ಕೇಳಿ, ನೀವೇ ಉತ್ತರ ಹೇಳಿದಿರಿ. ಆದರೆ ಇದನ್ನು ನಾವು ಸಮಗ್ರವಾಗ ಹೇಳಬೇಕಾದರೆ, ಇಲ್ಲ ಕೇಳಿರುವುದು, ಇಡೀ ರಾಜ್ಯದಲ್ಲಿ ಏನು ಪವರ್ ಶಾರ್ಟೆಜ್ ಇದೆ, ಏನು ಕಾರಣ; ನಾನು ಹೇಳುವುದು ಅವರು ಯಾವುದೋ ಸರ್ವೆ ನಂಬರ್ ಪಂಪ್‌ಸೆಟ್‌ಗೆ ಕೊಟ್ಟಿರಲಿಲ್ಲ, ಅಲ್ಲಿ ಯಾವುದೋ....

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾನು ವಿಷಯ ಹೇಳುತ್ತೇನೆ. ನಾನೂ ಮಣ್ಣಿನ ಮಗ. ನಮ್ಮ ದೇವೇಗೌಡರು ಈ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಗುರುತುವಾದಂತಹ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆ ರೈತರ ಬೆನ್ನು ಮೂಳೆ ಮುರಿದುಹೋಗಿದೆ.

ಶ್ರೀ ಜೆ.ಹೆಚ್. ಪಟೇಲ್ : ನೀವು ಯಾವ ಮಣ್ಣಿನ ಮಗನೋ ಅದೇ ಮಣ್ಣಿನ ಮಗ ನಾನು.

ಛೇರ್‌ಮನ್ : ಇಲ್ಲಿ ಸಬ್ಜೆಕ್ಟ್ ಇರತಕ್ಕಂಥಾದ್ದ್ ವಿದ್ಯುಚ್ಛಕ್ತಿ ಅಭಾವದಿಂದ ಜನರಿಗೆ ಉಂಟಾಗಿರತಕ್ಕಂಥ ತೊಂದರೆ. ಅದರಲ್ಲಿ ಏತಕ್ಕೆ ಅಭಾವ ಬಂದಿದೆ, ಎಲ್ಲಿ ಅಭಾವ ಬಂದಿದೆ, ಎಲ್ಲಿ ಅಭಾವ ಬಂದಿದೆ, ಟೋಟಲ್ ಉತ್ಪಾದನೆ ಏನು ಇದೆ, ಬೇಡಿಕೆ ಏನಿದೆ, ಎಲ್ಲಿ ಅಭಾವವಾಗುತ್ತಿದೆ ಎನ್ನುವ ಬೇರೆ ಹೋಗಬೇಕೇ ವಿನಃ ಬೇರೆಯದ್ದು ಬೇಡ ಎಂದು ಅವರು ಹೇಳುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಈ ರಾಜ್ಯದ ರೈತರನ್ನು ಶೋಷಣೆ ಮಾಡುತ್ತಿದ್ದೀರಿ ಎಂದು ಸ್ಪಷ್ಟವಾಗಿ ಹೇಳತ್ತಿದ್ದೇನೆ. ಈ ರಾಜ್ಯದ ರೈತ ಸಾಲ ಮಾಡಿ, ಸಾಲದ ಬಡ್ಡಿ ಕಟ್ಟುವುದಕ್ಕೆ ಓಲೆ ಮಾರಿದ. ಸಾಲವು ಉಳಿಯಿತು ಎನ್ನುವ ರೀತಿಯಲ್ಲಿ ನಮ್ಮ ರೈತನ ಪರಿಸ್ಥಿತಿ ಇದೆ. ಅವನಿಗೆ ವೊಲ್ಟೇಜ್ ಇಲ್ಲ, ಅವನು ಮೋಟಾರ್ ಸುಟ್ಟುಹೋದರೆ ಸಾಲ ತೆಗೆದುಕೊಂಡಿರುತ್ತಾನೆ. ಅದನ್ನು ರಿಪೇರಿ ಮಾಡಿಸುವುದಕ್ಕೆ ಹಣ ಇಲ್ಲ, ಕಡೆಗೆ ಅವನ ಹತ್ತಿರ ಇರತಥ ಎರಡು ಎಕರೆ ಭೂಮಿಯಲ್ಲಿ ಬೆಳೆಯಬೇಕಾಗಿರತಕ್ಕಂಥ ಬೆಳೆಯನ್ನು ಕೂಡ ಕಾಣದೆ ಇದ್ದಾನೆ. ಅವನು ಎಷ್ಟು ಕಷ್ಟದಲ್ಲಿ ಸಿಕ್ಕಿದ್ದಾನೆ ಎಂದು ಈ ಸರ್ಕಾರ ಯೋಚನೆ ಮಾಡಿದೆಯಾ? ವಿದ್ಯುಚ್ಛಕ್ತಿಯನ್ನು ಬೇರೆಯವರಿಗೆ ಕೊಡುವಂತಹ ಅವಶ್ಯಕತೆ ಏನಿತ್ತು? ನಮ್ಮಲ್ಲಿ ಇರತಕ್ಕಂಥ ಅಗಾದವಾದ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಕ್ರೋಢೀಕರಿಸಿಕೊಳ್ಳಬೇಕು. ಮತ್ತು ನಮ್ಮಲ್ಲಿರತಕ್ಕಂಥ ಕೈಗಾರಿಕೆಗಳಿಂದ ನಾಲ್ಕೂ ನೂರು ಕೋಟಿ ರೂಪಾಯಿಗಳು ವಿದ್ಯುತ್ ಬಾಕ ಬರಬೇಕು. ನಾಲ್ಕು ನೂರು ಕೋಟಿ ರೂಪಾಯಿಗಳನ್ನು ವಸೂಲು ಮಾಡಿ ಈ ರಾಜ್ಯದ ವಿದ್ಯುತ್ ನಿಗಮವನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಆಗುತ್ತಿರಲಿಲ್ಲವೆ. ಇವತ್ತು ರೈತನ ಬಾಳಿನ ಮೇಲೆ ಚಕ್ಕಂದವಾಡುತ್ತಿದ್ದೀರಿ. ರೈತನ ಬದುಕು ಅಷ್ಟೊಂದು ಕಷ್ಟವಾಗಿದೆ. ಇದನ್ನು ಯೋಚನೆ ಮಾಡಿ. ಈ ಸದನದಲ್ಲಿ ಎಲ್ಲರೂ ಕೂಡ ರೈತನ ಮಕ್ಕಳೇ. ನಾನೂ ಕೂಡ ಒಬ್ಬ ರೈತನ ಮಗ., ದೇವೇಗೌಡರು ಕೂಡ ರೈತನ ಮಗನೇ, ಪಟೇಲರು ಹೇಳಿದ ಹಾಗೆ ಅವರೂ ಕೂಡ ರೈತನ ಮಗನೇ. ರೈತರ ಬಗ್ಗೆ ಕಾಳಜಿ ಇರತಕ್ಕಂಥ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ರೈತರ ಕಡೆ ಗಮನ ಹರಿಸಬೇಕು,

ಈ ರಾಜ್ಯದ ರೈತರುಗಳಿಗೆ ಏನು ವಿದ್ಯುಚ್ಛಕ್ತಿ ದೊರೆಯಬೇಕು ಅದಕ್ಕೂ ಸಹ ವೊಲ್ಟೇಜ್ ಕಡಿಮೆಯಾಗುತ್ತದೆ., 350 ಅಥವಾ 360 ಇದ್ದರೆ ಮಾತ್ರ ಮೋಟಾರ್ ಓಡುತ್ತದೆ ಇಲ್ಲದಿದ್ದರೆ, ಮೋಟಾರ್ ಓಡುವುದಿಲ್ಲ. ಅದು ಸುಟ್ಟುಹೋದರೆ ಪುನಃ ಅವನು ಏನಾದರೂ ಮಾಡಬೇಕು. ಇಂತಹ ಪರಿಸ್ಥಿತಿ ಇರುವಾಗ ಏನಾದರೂ ಮಾಡಬೇಕು. ಇಂತಹ ಪರಿಸ್ಥಿತಿ ಇರುವಾಗ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಇರತಕ್ಕಂಥ ರೈತರಿಗೆ ಕೊಳವೆ ಬಾವಿ ಮುಖಾಂತರ ನೀರು ತೆಗೆದುಕೊಳ್ಳುವುದಕ್ಕೆ ಹತ್ತು ತಿಂಗಳು 12 ತಿಂಗಳು ಕಾಯಿಸಿ ವೊಲ್ಟೇಜ್ ಕೊಡುವಂತಹ, ಅಲ್ಲಿ ಕೆಪಾಸಿಟಿ ಟ್ರಾನ್ಸ್‌ಫಾರ್ಮರ್‌ಗಳು ಇದ್ದರೂ ಕೂಡ ಅಧಿಕಾರಿಗಳು ಅದರಲ್ಲಿ ಶಾಮೀಲಾಗಿ ಅವರಿಗೆ ಮೋಸ ಮಾಡಿ ಇವರಿಂದ ಲಂಚ ಪಡೆಯತಕ್ಕಂಥ ದಿಕ್ಕಿನಲ್ಲಿ ಬಡ ಜನತೆಯ ಮೇಲೆ ಬ್ರಹ್ಮ ಅಸ್ತ್ರವನ್ನು ಬಿಡುತ್ತಿದ್ದಾರೆ. ನಿಮ್ಮ ಬಗ್ಗೆ ನಮಗೆ ಕಾಳಜಿ ಇದೆ. ನಿಮಗೆ ರೈತರ ಬಗ್ಗೆ ಇರತಕ್ಕಂಥ ಅನುಕಂಪಕ್ಕೂ ಕೂಡ ನಾವು ಮೆಚ್ಚುತ್ತೇವೆ. ಆದರೆ ಆ ಅನುಕಂಪ ಅನುಕಂಪವಾಗಿಯೇ ಉಳಿದರೆ ರೈತರ ಸಮಸ್ಯೆ ಅಲ್ಲ, ಈ ರಾಜ್ಯದ ಯಾವುದೇ ಒಂದು ಸಮಸ್ಯೆನೂ ಬಗೆಹರಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಈ ರೈತರ ಬಗ್ಗೆ, ವಿದ್ಯುಚ್ಛಕ್ತಿ ಬಗ್ಗೆ ಇನ್ನು 2-3 ತಿಂಗಳಲ್ಲಿ ಮಾಡದೇ ಹೋದರೆ ನಾನೇ ವಿಧಾನಸೌಧದ ಮುಂದೆ ಎಲ್ಲಾ ರೈತರನ್ನೂ ಕರೆಯಿಸಿಕೊಂಡು ಚಳುವಳಿಯ ಮೂಲಕ ಹೋರಾಟ ಮಾಡಬೇಕಾದ್ದು ಅನಿವಾರ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು

ಹೇಳುತ್ತೇನೆ. ಈ ಬಗ್ಗೆ ಸರ್ಕಾರದ ನಿಲುವು ಏನು ಎನ್ನತಕ್ಕಂಥ ಮಾತನ್ನು ಕೇಳುತ್ತಿದ್ದೇನೆ. ಸ್ಪಷ್ಟವಾದ ನಿಲುವು ಹೇಳಬೇಕು.

ಛೇರ್ಮನ್ : ಅದು ನಿಯಮಾವಳಿಯಾಗಿಲ್ಲ, ಎಲ್ಲರೂ ಮಾತನಾಡಿದ ಮೇಲೆ ಉತ್ತರ ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

+ ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಯ ಕಷ್ಟ ಬಹುಶಃ ಇಲ್ಲಿ ಪಕ್ಷ, ಪಂಗಡ ಎಲ್ಲವನ್ನು ಕೂಡ ಮೀರಿ ಇರುವಂತಹಹ ದೊಡ್ಡ ಸಮಸ್ಯೆಯಾಗಿ ಇಡೀ ರಾಜ್ಯದಲ್ಲಿ ಅದೃಷ್ಟದ ಜೊತೆಗೆ ಆಟವಾಡುತ್ತಿದೆ. ಸಂಪತ್ತನ್ನು ಗಳಿಸುವುದಕ್ಕಾಗಿ ಲಾಟರಿ ಟಿಕೇಟನ್ನು ತೆಗೆದುಕೊಳ್ಳುತ್ತಾರೆ. ಇವತ್ತ್ ವಿದ್ಯುಚ್ಛಕ್ತಿಯು ಅದೇ ರೀತಿಯಾಗಿದೆ. ಸಾಕಷ್ಟು ದುಬಾರಿ ವೆಚ್ಚದಲ್ಲಿ ಕರೆಂಟ್ ತೆಗೆದುಕೊಂಡು ಪಂಪ್‌ಸೆಟ್, ಸಣ್ಣ ಕೈಗಾರಿಕೆಗಳಿಗೋ ಅಥವಾ ಮನೆಗೆ ಬೆಳಕಿಗೊ, ಉರುವಲು ಉಳಿಸಬೇಕೆಂದೋ, ಮಾಡಿದರೆ ವಿದ್ಯುಚ್ಛಕ್ತಿ ಸಂಪರ್ಕವನ್ನು ತೆಗೆದುಕೊಂಡರೆ ಅದು ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆ. ಅದು ತೀರ ಅನಿಶ್ಚಿತ ಪರಿಸ್ಥಿತಿಯಾಗಿಬಿಟ್ಟಿದೆ. ಅದು ಬಂದಾಗ ಹಾಕಿದಂತಹ ಬಲ್ಬ್‌ಗಳು ಪುಡಿಯಾಗುವುದು, ರೇಡಿಯೋ, ಟಿ.ವಿ. ಸೆಟ್‌ಗಳು ಸುಟ್ಟು ಹೋಗುತ್ತವೆ. ಯಾವುದೋ ಕಾಲದಲ್ಲಿ ಹಾಕಿದಂತಹ ಓಬಿರಾಯನ ಕಾಲದ ಟ್ರಾನ್ಸ್‌ಫಾರಂಗಳು ವೈರ್‌ಗಳು ಆಗಿವೆ. ವಿದ್ಯುಚ್ಛಕ್ತಿ ಇಲಾಖೆಗಳು ಯಾವ ಸ್ಥಿತಿಯಲ್ಲಿ ನಡೆಯುತ್ತಿವೆ ಎಂದು ನಮಗೂ ನಿಮಗೂ ಗೊತ್ತಿದೆ. ಇದಕ್ಕೆ ಒಂದು ಚಿಕ್ಕ ಉದಾಹರಣೆಯನ್ನು ಕೊಡುತ್ತೇನೆ. ನೀವು ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ಇದ್ದೀರಿ. 1987ನೇ ಇಸವಿಯಲ್ಲಿ ಶಿವಮೊಗ್ಗ ಜಿಲ್ಲೆಯ ಮಂದಗದ್ದೆ ಮಾರ್ಗವಾಗಿ 11 ಕೆ.ವಿ. ಲೈನ್ ಅನ್ನು 45 ಕಿ.ಮಿ. ದೂರ ಕಗ್ಗಾಡಿನಲ್ಲಿ ಲೈನ್ ಮೇಲೆ ಬಳ್ಳಿಗಳು ಹಬ್ಬಿವೆ. ಆ ಲೈನ್‌ನಲ್ಲಿ ಇರುವಂತಹ ಮೆಡಿರೀಯಲ್ಸ್‌ಗಳನ್ನು ಕದ್ದು ತೆಗೆದುಕೊಂಡು ಹೋಗುತ್ತಿದ್ದಾರೆ. ಆ 45 ಕಿ.ಮಿ.ಲೈನ್ ಎಳೆಯಬೇಕಾದರೆ ಎಷ್ಟು ವೆಚ್ಚವಾಗಿದೆ. ಅದನ್ನು ಯೋಚನೆ ಮಾಡಿ. ನಾನು 1987ನೇ ಇಸವಿ ಎಂದು ಹೇಳಿದೆ. 1981ನೇ ಇಸವಿಯಲ್ಲಿ ಹಾಕಿದಂತಹ ಲೈನ್ ಯಾರೋ ಕೋರ್ಟಿಗೆ ಹೋದರಂತೆ ಅದನ್ನು ಅಲ್ಲಿಗೆ ನಿಲ್ಲಿಸಿದ್ದಾರೆ. ಮೊನ್ನೆ ಬಿಚ್ಚಿಕೊಂಡು ಹೋಗುತ್ತಾರೆಂದು ಕನೆಕ್ಷನ್ ಕೊಟ್ಟರಂತೆ. ಅದರಿಂದ ಇಬ್ಬರು ಸತ್ತರು. ಇದರ ಬಗ್ಗೆ ಕೆ.ಇ.ಬಿ.ಯವರ ಅಧಿಕಾರಿಗಳ ಗಮನವನ್ನು ಸೆಳೆದು ಸಾಕಾಯಿತು. ಅವರು ಯಾವ ರೀತಿ

ರಿಪೇರಿ ಮಾಡುತ್ತಾರೋ ನಮಗೆ ಗೊತ್ತಿಲ್ಲ, ಒಟ್ಟಾರೆ ಜನರ ಜೀವನದ ಜೊತೆಯಲ್ಲಿ ಚೆಲ್ಲಾಟವಾಡುವುದು ಸರಿಯಲ್ಲ, ಇವತ್ತು ಸೀಮೆಎಣ್ಣೆಯ ಸರಬರಾಜು ಸರಿಯಾಗಿಲ್ಲ. ಅಡಿಕೆ ಸುಲಿಯುವುದಕ್ಕೆ ಬೆಳಕು ಬೇಕು. ಕರೆಂಟ್ ಬಂದಿದೆ ಎಂದು ಸೀಮೆಎಣ್ಣೆ ಚಿಮಣಿಗಳನ್ನು ಮಾರಾಟ ಮಾಡಿಕೊಂಡಿದ್ದೇವೆ. ಸೀಮೆಎಣ್ಣೆ ಚಿಮಣಿ ಬುಟ್ಟಿಗಳು ಇವತ್ತು ಯಾರ ಮನೆಗಳಲ್ಲೂ ಇಲ್ಲ, ಸೀಮೆಎಣ್ಣೆ ಸರಬರಾಜು ಕಡಿಮೆಯಾಗಿ 3-4 ಲೀಟರ್ ಕೊಡುತ್ತಿದ್ದಾರೆ. ಗ್ರಾಮಾಂತರ ಜನರಿಗೆ ಇನ್ನು ಕಡಿಮೆಯಾಗಿದೆ. ಗ್ಯಾಸ್ ಸರಬರಾಜು ಸರಿಯಾಗಿಲ್ಲ, ಗ್ಯಾಸ್ ಇರುವಂಥವರಿಗೆ ಇನ್ನು ಕಡಿಮೆ ಮಾಡಬೇಕೆಂದು, ಸ್ಟೇಟ್ ಪಾಲಿಸಿ ಇದೆ. ಮೊನ್ನೆ ದಿವಸ 3 ಲೀಟರ್ ಕಡಿಮೆ ಮಾಡಿ ಹಾಕಿದರು ಎಂದು ಸೀಮೆಎಣ್ಣೆ ವಿತರಕರ ಅಂಗಡಿಯ ಎದುರು ಗಲಾಟೆ ಮಾಡಿದರು. ದಯಮಾಡಿ ಅದನ್ನು ಸರಿ ಮಾಡಬೇಕು. ನಾನು ಮುಳುಗಡೆಯಾಗಿರುವಂತಹ ಪ್ರದೇಶದಿಂದ ಬಂದಿರುವಂಥವನು. ಶರಾವತಿ, ಚಕ್ರ, ವರಾಹಿ, ಈ ಮೂರು ಎಲೆಕ್ಟ್ರಿಸಿಟಿ ಪ್ರಾಜೆಕ್ಟ್‌ಗಳು ನನ್ನ ಕ್ಷೇತ್ರದಲ್ಲಿ ಇವೆ. ಸಾಕಷ್ಟು ಮನೆಗಳು, ಜಮೀನುಗಳು ಕಳೆದುಕೊಂಡಿದ್ದಾರೆ. ಅದರ ಬಗ್ಗೆ ಮುಂದಿನ ಸಾರಿ ಮಾತನಾಡುತ್ತೇನೆ. ಇನ್ನು ಅರಣ್ಯಗಳನ್ನು ಕಳೆದುಕೊಂಡಿದ್ದೇವೆ, ಬಹಳಷ್ಟು ನಾಶವಾಗಿದೆ. ಕರೆಂಟ್ ಇಲ್ಲವೆಂದು ಹೇಳಿ ಅರಣ್ಯದ ಮೇಲೆ ಲೋಡ್ ಬಿಡುತ್ತಿದ್ದಾರೆ. ಉರುವಲನ್ನು ಉಪಯೋಗಿಸಬೇಕಲ್ಲಾ ಅದಕ್ಕಾಗಿ ಮತ್ತೆ ಕಟ್ಟಿಗೆಗೆ

ಹೋಗಬೇಕಾಗುತ್ತದೆ. ಕಟ್ಟಿಗೆಯು ಟೌನ್ಗಳಲ್ಲಿ ಸರಿಯಾಗಿ ಸರಬರಾಜಾಗುತ್ತಿಲ್ಲ, ಅರಣ್ಯ ಇಲಾಖೆಯಿಂದ ತಂದರೆ ಹಿಡಿಯುತ್ತಾರೆ. ಅವರ ಕಣ್ಣು ತಪ್ಪಿಸಿ ತರಬೇಕಾಗುತ್ತದೆ. ಆಗ ಕಾಡಿನ ಮೇಲೆ ಲೋಡ್ ಬೀಳುತ್ತದೆ. ಈ ಸ್ಥಿತಿಯಲ್ಲಿ ಗ್ಯಾಸ್ ಮತ್ತು ಸೀಮೆಎಣ್ಣೆಯ ಸರಬರಾಜು ಸರಿಯಾಗಿಲ್ಲ. ಲೋಡ್ ಶೆಡ್ ಡೌನ್ ಯಾವ ಸಂದರ್ಭದಲ್ಲಿ ಆಗುತ್ತದೆಯೋ ಗೊತ್ತಿಲ್ಲ. ನಿರುದ್ಯೋಗಿ ಪದವೀಧರರು ಸಾಲ ಮಾಡಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಹಾಕಿದ್ದಾರೆ. ಅವರಿಗೆ ಸರ್ಕಾರದಿಂದ ನೌಕರಿ ಕೊಡುವುದಕ್ಕೆ ಆಗುವುದಿಲ್ಲ. ಅವರು ಸಾಲ ಮಾಡಿ ತೊಳಲಾಡುತ್ತಿದ್ದಾರೆ. ಕೆ.ಎಸ್.ಎಫ್.ಸಿ.ಯವರು ಕೈಗಾರಿಕೆಗಳನ್ನು ಜಪ್ತಿ ಮಾಡುತ್ತಿದ್ದಾರೆ, ಬೀಗ ಹಾಕುತ್ತಿದ್ದಾರೆ. ಏಕೆ ಎಂದು ಕೇಳಿದರೆ ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿಲ್ಲ, ಅದು ಯಾವಾಗ ಬರುತ್ತದೆ ಯಾವಾಗ ಹೋಗುತ್ತದೆ ಗೊತ್ತಿಲ್ಲ.

ಈ ಸಾರಿ ಅತಿ ಹೆಚ್ಚಿನ ಮಳೆ ಬಂದಿರುವುದು ನಿಮಗೆ ಗೊತ್ತಿದೆ. ಈ ಮಳೆಗಾಲ ಇಷ್ಟೊಂದು ಬಂದರೂ ಕೂಡ, ನೀರನ್ನು ತಡೆ ಹಿಡಿದುಕೊಂಡರೂ ಕೂಡ, ಇವತ್ತು ಕರೆಂಟ್ ಜನರೇಷನ್ ಆಗುತ್ತಿಲ್ಲ. ನಾನು ಸಾಕಷ್ಟು ಪ್ರಾಜೆಕ್ಟ್ಗಳಿಗೆ ಭೇಟಿ ನೀಡಿದ್ದೇನೆ. ಆ ಪ್ರಾಜೆಕ್ಟ್ಗಳಲ್ಲಿ ಎಷ್ಟು ಯೂನಿಟ್ಗಳು ಇವತ್ತು ರಿಪೇರಿ ಹಂತದಲ್ಲಿದೆ ಎಂಬುದನ್ನು ನೀವೇ ನೋಡಿ. ಯಾವಾಗಲೂ ಕೂಡ ರಿಪೇರಿ ಎಂದು ಹೇಳಿ ಅರ್ಧಕ್ಕಿಂತ ಹೆಚ್ಚು ಯೂನಿಟ್ಗಳಲ್ಲಿ ಕರೆಂಟ್ ಉತ್ಪಾದನೆಯಾಗುತ್ತಿಲ್ಲ. ಸಾಕಷ್ಟು ಕರೆಂಟನ್ನು ನಿಲುಗಡೆ ಮಾಡಿದ್ದಾರೆ, ಅಧಿಕಾರಿಗಳನ್ನು ಕೇಳಿದರೆ ವಿದೇಶದಿಂದ ಯಾವುದೋ ಸಾಮಾನು ತರಬೇಕೆಂದು ಹೇಳುತ್ತಾರೆ. ಸರ್ಕಾರ ಇದರ ಬಗ್ಗೆ ತೀವ್ರ ಗಮನಹರಿಸಬೇಕು. ಇದರಿಂದ ನಮ್ಮ ಉತ್ಪಾದನೆಗಳು ಕುಂಠಿತವಾಗುತ್ತದೆ. ಜನರ ಜೀವನ ಹಾಳಾಗುತ್ತದೆ. ಈ ಕರೆಂಟನ್ನು ನಂಬಿಕೊಂಡು ಸಾಕಷ್ಟು ಜನಜೀವನ ಅಸ್ತವ್ಯಸ್ತ ಆಗುತ್ತಿದೆ. ದಯಮಾಡಿ ತತ್ಕ್ಷಣವೇ ಸರ್ಕಾರ ಇದರ ಕಡೆಗೆ ಗಮನಕೊಡಬೇಕು. ಈ ಇಲಾಖೆಯನ್ನು ಸರಿಪಡಿಸಬೇಕು. ವಿದ್ಯುತ್ತನ್ನು ಸರಾಗವಾಗಿ ಸರಬರಾಜು ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

+ ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಧ್ಯಕ್ಷತೆಯಲ್ಲಿ ಕೆ.ಇ.ಬಿ.ಯ ಬಗ್ಗೆ ವಿಚಾರ ಮಾಡಲಿಕ್ಕೆ ಸಮಯ ಸಿಕ್ಕಿದ್ದು ನಿಜವಾಗಿಯೂ ಸುದೈವ. ತಾವು ಏಕೆ ಎಂದು ಕೇಳಬಹುದು. ರೈತರ - ಪುಂಪುಸೆಟ್ಟುಗಳಿಗೆ ದರ ನಿಗಧಿ ಮಾಡಬೇಕೆಂದು ಸರ್ಕಾರದ ನೀತಿ ಇದ್ದಾಗ ತಾವು ಅದನ್ನು ವಿರೋಧ ಮಾಡಿದ್ದಕ್ಕೆ ನಮಗೆ ನಿಜವಾಗಿಯೂ ಸಂತೋಷವಾಗಿದೆ. ಆ ಪಕ್ಷದಲ್ಲೂ ಸಹ ರೈತರ ಬಗ್ಗೆ ಕಾಳಜಿ ಇರುವಂಥ ವ್ಯಕ್ತಿಗಳು ಯಾರು ಎಂಬುದು ನಮಗೆ ಸಿಕ್ಕಿದೆ. ಇವತ್ತು ಈ ಗ್ರಾಮಾಂತರ ಪ್ರದೇಶಗಳ ಹಾಗೂ ಈ ನಮ್ಮ ಕರ್ನಾಟಕದ ಆರ್ಥಿಕ ಬೆಳವಣಿಗೆಗೆ ಎರಡು ಪ್ರಮುಖ ಕಾರಣಗಳಿವೆ. ಒಂದು ಒಕ್ಕಲುತನ ಮತ್ತೊಂದು ಕೈಗಾರಿಕೆ.

ಒಕ್ಕಲುತನ ಹಾಗೂ ಕೈಗಾರಿಕೆ ಈ ಎರಡೂ ವಿದ್ಯುತ್ತಿನ ಮೇಲೆ ಅವಲಂಬಿತವಾಗಿದೆ. ಎಂಬುದನ್ನು ತಮಗೆ ಹೇಳುವಂಥ ಅವಶ್ಯಕತೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಇವತ್ತಿನ ದಿವಸ ಗ್ರಾಮಾಂತರ ಜನರ ಜೀವನದ ಬದುಕಿನಲ್ಲಿ ವಿದ್ಯುತ್ ಎಷ್ಟು ಅನಿವಾರ್ಯವಾಗಿದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಹಿಟ್ಟು ಬೀಸುವುದರಿಂದ ಹಿಡಿದು ಕುಡಿಯುವ ನೀರಿನವರೆಗೂ ಜನ ವಿದ್ಯುತ್ತಿನ ಮೇಲೆ ಅವಲಂಬಿತರಾಗಿದ್ದಾರೆ. ಆದರೆ ಇದರಿಂದ ಏನಾಗಿದೆ ಎಂದರೆ ಇಡೀ ದಿವಸ ಕುಳಿತುಕೊಂಡರೂ ಸಹ ಮೋಟಾರು ಚಾಲನೆ ಆಗುವಷ್ಟು ವೋಲ್ಟೇಜ್ ಇರುವುದಿಲ್ಲ. ನಾವು ಇವತ್ತು ಚುನಾವಣೆಯನ್ನು ಮುಗಿಸಿ ಗ್ರಾಮಾಂತರ ಪ್ರದೇಶಗಳಿಗೆ ಹೋದೆವು

ಎಂದರೆ ನಮಗೆ ಬರುವಂಥ ಮೊದಲ ಸಮಸ್ಯೆ ಎಂದರೆ ವಿದ್ಯುಚ್ಛಕ್ತಿ ಮತ್ತು ಸಾರಿಗೆ. ಒಮ್ಮೆ ನಾನು ಒಂದು ಗ್ರಾಮಕ್ಕೆ ರಾತ್ರಿ ಹೊತ್ತಿನಲ್ಲಿ ಹೋಗಿದ್ದೆ.

ಆ ಗ್ರಾಮದ ಒಂದು ಭಾಗದಲ್ಲಿ ಕರೆಂಟ್ ಇತ್ತು ಇನ್ನೊಂದು ಭಾಗದಲ್ಲಿ ಕರೆಂಟ್ ಇರಲಿಲ್ಲ. ಏಕೆ ಎಂದು ವಿಚಾರಿಸಿದಾಗ ಒಂದು ವಾರ ಓಣಿಗೆ ಕರೆಂಟ್ ಕೊಡುತ್ತಾರೆ, ಇನ್ನೊಂದು ವಾರ ಈಗ ಎರಡು ಓಣಿಗೆ ಕರೆಂಟ್ ಕೊಡುತ್ತಾರೆ ಎಂದು ಹೇಳಿದರು. ಇದರಿಂದ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಖೋತಾ ಎಷ್ಟು ಇದೆ ಎಂಬುದನ್ನು ನಾವು ವಿಚಾರ ಮಾಡಬಹುದು. ಉದಾಹರಣೆಗೆ ನಮ್ಮ ತಾಲ್ಲೂಕನ್ನೇ ತೆಗೆದುಕೊಂಡರೂ ಸಹ ರೈತಾಪಿ ಜನ ಈ ಬೇಸಿಗೆಯಲ್ಲಿ ನೀರನ್ನು ಒದಗಿಸಿಕೊಳ್ಳಲಿಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಅಥವಾ ಪಂಪುಸೆಟ್ಟು ಸ್ಟಾರ್ಟ್‌ಮಾಡಿ ಒಮ್ಮೆ ಸುಟ್ಟಿತು ಅಂದರೆ ಎರಡು ಸಾವಿರ ರೂಪಾಯಿ ರೈತರಿಗೆ ಲಾಸಾಗುತ್ತದೆ. ಇವತ್ತು ಈ ರೈತನಿಗೆ ತಾನು ಬೆಳೆಯುವುದಕ್ಕಿಂತ ಹೆಚ್ಚು ಖರ್ಚು ಮಾಡುವಂಥ ಪ್ರಸಂಗ ಬಂದಿರುವುದರಿಂದ ಈ ವಿದ್ಯುತ್ತಿನ ಖೋತಾ ಏನು ಇದೆ, ಈ ಬಗ್ಗೆ ರಾಜ್ಯದ ಜನ ನಮ್ಮನ್ನು ನೋಡುತ್ತಿದ್ದಾರೆ. ವಿದ್ಯುತ್ತಿನ ಬಗ್ಗೆ ಸಮಗ್ರವಾದ, ವಿವರವಾದ ವರದಿಯನ್ನು ಸರ್ಕಾರ ಕೊಡಬೇಕು. ಎಷ್ಟು ಖೋತಾ ಇದೆ ಎಂಬುದನ್ನೂ ಸಹ ತಿಳಿಸಬೇಕು. ಇವತ್ತು ಕರ್ನಾಟಕದಲ್ಲಿ ಒಂಭತ್ತು ಲಕ್ಷ ಪಂಪುಸೆಟ್ಟು ಇದೆ. ಹಾಗೂ ಪ್ರತಿ ವರ್ಷ ಅರವತ್ತು ಸಾವಿರ ಪಂಪುಸೆಟ್ಟುಗಳು ಇನ್ನೂ ಜಾಸ್ತಿಯಾಗುತ್ತಿದೆ. ಈಗಿರುವಂಥ ಪಂಪುಸೆಟ್ಟುಗಳಿಗೆ ಕರೆಂಟ್ ಇಲ್ಲ, ಮುಂದೆ ಬರುವಂತಹವರಿಗೆ ಆಸೆ ಹುಟ್ಟಿಸುವುದರಲ್ಲಿ ತೊಂದರೆ ಇದೆ. ಆದ್ದರಿಂದ ನಮಗೆ ವಿದ್ಯುತ್ ಎಷ್ಟು ಸಿಗುತ್ತಿದೆ. ಇದರಿಂದ ಎಷ್ಟು ಖೋತಾ ಎಂಬ ಸಮಗ್ರವಾದ ವಿವರವನ್ನು ಕರ್ನಾಟಕದ ಜನತೆಗೆ ಸರ್ಕಾರ ತೀವ್ರವಾಗಿ ಕೊಡಬೇಕು ಎಂದು ಹೇಳಿ ಹಾಗೂ ಈ ಸಮಸ್ಯೆಯನ್ನು ನೀಗಿಸಲಿಕ್ಕೆ ಪ್ರಾಮಾಣಿಕವಾದ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾನು ಜಾಸ್ತಿ ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ, ಮಾನ್ಯ ವಿದ್ಯುಚ್ಛಕ್ತಿ ಸಚಿವರು ಹೇಳಿದ ರೀತಿ ಇದರ ಬಗ್ಗೆ ಮಾತನಾಡುತ್ತಾ ಹೋದರೆ ಮೂರು ದಿವಸ ಅಲ್ಲ ನಾಲ್ಕು ದಿವಸ ಬೇಕಾದರೂ ಮಾತನಾಡಬಹುದು. ಹಿಂದೆ ಸುಮಾರು ಪ್ರತಿ ಶಾಸನಸಭಾ ಸದಸ್ಯರು ವಿದ್ಯುತ್‌ಚ್ಛಕ್ತಿ ಅಭಾವದ ಬಗ್ಗೆ ತೀವ್ರವಾದಂಥ ಚರ್ಚೆ ಮತ್ತು ಕಳಕಳಿ ಇವೆಲ್ಲಾ ಬಂದಾಗ ಇದೇ ಸದನದಲ್ಲಿ ಶಾಸಕರಾಗಿದ್ದಂಥ ಎ. ನಾಗರಾಜುರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಅವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿಯನ್ನು ತಾವೂ ನೋಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಆ ವರದಿಯಲ್ಲಿನ ಅಂಶಗಳನ್ನು ಸಂಪೂರ್ಣವಾಗಿ ತಾವು ಜಾರಿಮಾಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡರೆ ಈ ರಾಜ್ಯದಲ್ಲಿ ವಿದ್ಯುತ್ ಚ್ಛಕ್ತಿ ಅಭಾವ ಸಾಕಷ್ಟು ನೀಗಬಹುದು ಎಂದು ನನಗೆ ಅನ್ನಿಸುತ್ತದೆ. ಇದು ನನ್ನ ಪ್ರಾಮಾಣಿಕವಾದಂಥ, ಪರಿಣಾಮಕಾರಿಯಾದಂತ ಚಿಂತನೆ ಜೊತೆಗೆ ನಾನು ತೀರಾ ದೊಡ್ಡ ದೊಡ್ಡ ಕಾರ್ಖಾನೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಜನಸಾಮಾನ್ಯರಿಗೆ ಆಗತಕ್ಕಂಥ ಪರಿಸ್ಥಿತಿ ಏನು? ಇದನ್ನು ತಾವು ನೋಡಬೇಕು. ಈಗ ನಾನು ಅನುಭವಿಸುತ್ತಾ ಇದ್ದೇನೆ, ಈಗ ಮಂತ್ರಿಗಳ ಮನೆಯಲ್ಲಿ ವಿದ್ಯುತ್ ಇರುತ್ತದೆಯೇ ಅಥವಾ ನಿಲ್ಲುತ್ತೋ ನನಗೆ ಗೊತ್ತಿಲ್ಲ, ರಾಜಭವನದಲ್ಲಿ ನಿಲ್ಲುತ್ತೋ ನನಗೆ ಗೊತ್ತಿಲ್ಲ, ನನಗಂತೂ ಆರೂವರೆ, ಏಳುಗಂಟೆ ಆಯಿತು ಅಂದರೆ ವಿದ್ಯುಚ್ಛಕ್ತಿ ನಿಲ್ಲುತ್ತದೆ. ಎಂತಹ ಸಂದರ್ಭದಲ್ಲಿ ನಿಲ್ಲುತ್ತದೆಂದರೆ ನಾವು ಮಾನ್ಯ ಸಿದ್ಧರಾಮಯ್ಯನವರ ತರಹ

ಗಡ್ಡಗಿಡ್ಡ ಬಿಟ್ಟುಕೊಂಡಿದ್ದರೆ ನಮಗೆ ಆ ಪರಿಸ್ಥಿತಿ ಬರುತ್ತಿರಲಿಲ್ಲ. ನಿಮ್ಮ ವಿದ್ಯುಚ್ಛಕ್ತಿ ಪರಿಸ್ಥಿತಿ ನೋಡಿದರೆ ನಾವು ಗಡ್ಡ ಬಿಡಬೇಕೋ ಏನೋ ಎನ್ನುವ ಪರಿಸ್ಥಿತಿ ಬಂದಿದೆ. ಬೆಳಿಗ್ಗೆ 7 ಗಂಟೆಗೆ ನಾವು ಕ್ಷೌರ ಮಾಡುವುದಕ್ಕೆ ಹೊರಟರೆ, ಅರ್ಧ ಮಾಡಿರುತ್ತೇವೆ ಅಷ್ಟರಲ್ಲಿ ಲೈಟ್ ಆಫ್ ಆಗಿರುತ್ತದೆ, ಆಗ ನಾವು ಯಾವುದು ಕಟ್ ಮಾಡಿಕೊಳ್ಳಬೇಕು? ಚರ್ಮ ಕಟ್ ಮಾಡಿಕೊಳ್ಳಬೇಕೇ ಅಥವಾ....(ನಗು). ನಗುವುದಲ್ಲ, ಇದು ಸತ್ಯ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತೊಂದು ಕಡೆ ಸ್ನಾನ ಮಾಡುವುದಕ್ಕೆ ಬಿಸಿನೀರು. ಬೆಳಿಗ್ಗೆ 7 ಗಂಟೆಗೆ ಸ್ನಾನ ಮಾಡಬೇಕೆಂದರೆ 7ಕ್ಕೆ ಸರಿಯಾಗಿ ನಿಲ್ಲಿಸುತ್ತಾರೆ ಕರೆಂಟ್.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ನಾನು ಒಂದು ಕ್ರಿಯಾಲೋಪ ಎತ್ತುತ್ತೇನೆ. ಮಾನ್ಯ ಸಿದ್ಧರಾಮಯ್ಯನವರ ಗಡ್ಡಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಅಲ್ಲಿ ಕುಳಿತುಕೊಂಡು ಮಾತನಾಡುವುದಕ್ಕೆ ಆಗುವುದಿಲ್ಲ, ಮೊದಲು ನೀವು ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವುದನ್ನು ಕಲಿತುಕೊಳ್ಳಿ. ಆಮೇಲೆ ಮಾತನಾಡಿ. ಮಾನ್ಯ ಸದಸ್ಯರು ಸದನವನ್ನು ಮೈಸೂರು ಕಡೆಗೆ ಎಳೆದುಕೊಂಡು ಹೋಗುತ್ತಿದ್ದಾರೆ. ನಿಮಗೆ ಮಾತು, ನಗು ಏನೂ ಇಲ್ಲವೇ ಇಲ್ಲವೇ? ಎಲ್ಲಾ ಬರೀ ಹೀಗೆಯೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನನಗೂ ಮೇಯರ್ ಆಗಿ ಕೆಲಸ ಮಾಡಿರುವ ಅನುಭವ ಇದೆ.

ಶ್ರೀ ವಾಟಾಳ್ ನಾಗರಾಜ್ : ಎಷ್ಟೋ ಜನ ಮೇಯರ್ ಆಗಿ ಕೆಲಸ ಮಾಡಿರುವುದನ್ನು ನಾನು ನೋಡಿದ್ದೇನೆ. ಮೈಸೂರಿನಲ್ಲಿ 50 ಜನ, ಬೆಂಗಳೂರಿನಲ್ಲಿ 25 ಜನ ಕೆಲಸ ಮಾಡಿದ್ದಾರೆ. ನಾನೂ ಕೂಡ ಕಾರ್ಪೊರೇಟರ್ ಆಗಿದ್ದವನು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಸದಸ್ಯರು ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕೇ ಹೊರತು ನನ್ನನ್ನು ಉದ್ದೇಶಿಸಿ ಮಾತನಾಡುವುದು ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ದಿನನಿತ್ಯ ನಡೆಯತಕ್ಕ ಜನ ಸಾಮಾನ್ಯರ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಜನಸಾಮಾನ್ಯರಿಗೆ ಆಗತಕ್ಕ ತೊಂದರೆಯನ್ನು ಮೊದಲು ತಪ್ಪಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ನಿಮ್ಮ ಇಲಾಖೆ ಬಹಳ ಜವಾಬ್ದಾರಿಯುತವಾದ ಗುರುತರವಾದ ಇಲಾಖೆ, ಅದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ನಿಮ್ಮ ಅಧಿಕಾರಿಗಳ ಬಗ್ಗೆ ಬಹಳ ಗೌರವ ಇದೆ. ನಿಮ್ಮ ಅಧ್ಯಕ್ಷರು ಮತ್ತು ಪವರ್ ಕಾರ್ಪೊರೇಷನ್ ವ್ಯವಸ್ಥಾಪಕ ನಿರ್ದೇಶಕರ ಬಗ್ಗೆ ಬಹಳ ಗೌರವ ಇದೆ. ಅವರು ಒಳ್ಳೆಯ ಅಧ್ಯಕ್ಷರು ಮತ್ತು ಒಳ್ಳೆಯ ವ್ಯವಸ್ಥಾಪಕ ನಿರ್ದೇಶಕರು. ಆದರಲ್ಲಿ ಭಿನ್ನಾಭಿಪ್ರಾಯ ಇಲ್ಲ, ಇದನ್ನು ಸರಿಪಡಿಸುವುದಕ್ಕೆ ಯಾರೂ ಬಂದರು? ಯಾರೇ ಮಂತ್ರಿಗಳು ಬಂದರೂ ಇದೇ ಪರಿಸ್ಥಿತಿ ಇದೇ ವ್ಯವಸ್ಥೆ ಇರುತ್ತದೆ. ಆದುದರಿಂದ ತಾವು ಆಳವಾಗಿ ಇದರ ಬಗ್ಗೆ ತೀರ್ಮಾನ ಮಾಡಿ ಚಿಂತನೆ ಮಾಡಬೇಕಾಗುತ್ತದೆ. ನಾವು ಅರ್ಧಗಂಟೆಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ, ನಾವೇನೋ ಮಾತನಾಡಬಹುದು, ಮಾತನಾಡುವುದರಲ್ಲಿ ಅರ್ಧ ಗಂಟೆ ಕಳೆಯುತ್ತೇವೆ. ಖಂಡಿತ ಇದಕ್ಕೆ ಅರ್ಧಗಂಟೆ ಆಗುವುದಿಲ್ಲ, ಸಮಗ್ರವಾದ ಚರ್ಚೆ ಈ ಸದನದಲ್ಲಿ ಅನೇಕ ಬಾರಿ ನಡೆದು ಸದನಕ್ಕೆ ಒಂದು ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ಪ್ರಾಮಾಣಿಕವಾಗಿ ಜಾರಿಗೆ ತರುವುದಾದರೆ ರಾಜ್ಯದಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ, ಇದು. ಒಂದು, ಇನ್ನು ಎರಡನೆಯದಾಗಿ, ವಿಶ್ವಬ್ಯಾಂಕಿನವರು ನಿಮಗೆ ಹಣ ಕೊಡುತ್ತಿಲ್ಲ. ಮುಂದೆ ನೀವು ಏನು ಮಾಡುತ್ತೀರಿ?

ಅವರು ಹಣ ಕೊಡುವುದರ ಬಗ್ಗೆ ಏನಾದರೂ ಮತ್ತೆ ಮಾತುಕತೆ ಆಡಿದ್ದೀರಾ? ಅದು ನನ್ನ ಗಮನಕ್ಕೆ ಬಂದಿಲ್ಲ. ನೀವು ಏನು ಮಾಡಿದ್ದೀರಿ? ಅವರು ಹಣ ಕೊಡದಿದ್ದರೆ ಪರ್ಯಾಯವಾಗಿ ನೀವು ಏನು ಮಾಡುತ್ತೀರಿ? ಜನಸಾಮಾನ್ಯರಿಗೆ ಆಗತಕ್ಕ ಈ ಒಂದು ತೊಂದರೆಯನ್ನು ತಾವು ಏನಾದರೂ ಮಾಡಿ ಸರಿಪಡಿಸಲೇಬೇಕು. ಇಲ್ಲಿ ಒಂದು ಕಡೆ ಹಳ್ಳಿಯ ಜನರಿಗೆ, ಮತ್ತೊಂದು ಕಡೆ ಪಟ್ಟಣದವರಿಗೆ, ಮನೆಯ ಜನರಿಗೆ, ಅದು ಸಾಮಾನ್ಯರ ಮನೆ ಇರಬಹುದು, ದೊಡ್ಡವರ ಮನೆ ಇರಬಹುದು, ಬೇರೆ ಯಾವ ರೀತಿಯ ಮನೆ ಇರಬಹುದು ಪ್ರತಿದಿನ ಕರೆಂಟ್ ಹೋಗುತ್ತದೆ. ಕೆಲವು ತಾಲ್ಲೂಕುಗಳಲ್ಲಿ ಕೆಲವು ಕಡೆ ಹಳ್ಳಿಗಳಲ್ಲಿ ದಿನಗಟ್ಟಲೆ 2-3 ದಿನವಾದರೂ ಕರೆಂಟ್ ಇರುವುದಿಲ್ಲ. ಉದಾಹರಣೆಗೆ ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ಪರಿಸ್ಥಿತಿಯನ್ನು ನೂರಾರು ಸಲ ಹೇಳಿದ್ದೇನೆ. ನನ್ನ ತಾಲ್ಲೂಕಿನಲ್ಲಿ 5 ಕೋಟಿ ರೂಪಾಯಿಯ ಬೆಳೆ ಹೋಗುತ್ತಿದೆ. ಅದಕ್ಕೆ ಕಾರಣವೇನು ಅಂದರೆ ಕರೆಂಟ್ ಇಲ್ಲದೇ ಇರುವುದು. 5 ದಿನಕ್ಕೆ ಒಂದು ಸಾರಿ 7 ದಿನಕ್ಕೆ ಒಂದು ಸಾರಿ ಸಮರ್ಪಕವಾದ ವ್ಯವಸ್ಥೆ ಸಮರ್ಪಕವಾದ ಹಂಚಿಕೆ ಇಲ್ಲದಿರುವುದರಿಂದ ಇಂಥ ವ್ಯವಸ್ಥೆ ಆಗಿದೆ. ದಯವಿಟ್ಟು ಪರಿಣಾಮಕಾರಿಯಾಗಿ ಈ ಕೆಲಸ ಮಾಡಿ, ತಾವು ಭರವಸೆ ಕೊಟ್ಟ ಮೇಲೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕೆಂಬ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

+ ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನನಗೆ ಎಲ್ಲಿಂದ ಪ್ರಾರಂಭ ಮಾಡಿ ಎಲ್ಲಿಗೆ ನಿಲ್ಲಿಸಬೇಕೆಂಬುದು ಅರ್ಥವಾಗುತ್ತಿಲ್ಲ. ಪ್ರತಿ ವರ್ಷ 3 ಲಕ್ಷ ಕನೆಕ್ಷನ್ಸ್ ಜಾಸ್ತಿಯಾಗುತ್ತಿದೆ. ಈಗ 66 ಲಕ್ಷ ಕನೆಕ್ಷನ್ಸ್ ರಾಜ್ಯದಲ್ಲಿ ಇವೆ. ಈ 66 ಲಕ್ಷ ಜನರು ಒಂದು ಸಾರಿ ಸ್ವಿಚ್ ಆನ್ ಮಾಡಿದರೆ 10200 ಮೆಗಾವ್ಯಾಟ್ ವಿದ್ಯುಚ್ಛಕ್ತಿಬೇಕು. ಆದರೆ ನಮ್ಮಲ್ಲಿ ಇವತ್ತು ಒಟ್ಟು ಉತ್ಪಾದನೆ ಮಾಡುವ ಶಕ್ತಿ ಇರುವುದು 3300 ಮೆಗಾವ್ಯಾಟ್. ವಾಸ್ತವವಾಗಿ ಉತ್ಪಾದನೆಯಾಗುತ್ತಿರುವುದು 2400 ಮೆಗಾವ್ಯಾಟ್. ಬೇರೆ ಬೇರೆ ಕೇಂದ್ರದ ವಿದ್ಯುತ್ ಅಂದರೆ ನೈವೇಲಿ, (ತಮಿಳುನಾಡು) ಕಲ್ಪಾಕಂ ಮತ್ತು ರಾಮಗುಂಡುನಿಂದ ಬರುತ್ತದೆ. ಈ 3 ಕೇಂದ್ರಗಳಿಂದ ಬರತಕ್ಕ ವಿದ್ಯುತ್ ಒಟ್ಟು 600 ಮೆಗಾವ್ಯಾಟ್. 2400 ಮೆಗಾವ್ಯಾಟ್ ನಾವು ಜನರೇಟ್ ಮಾಡುವುದು. ಹೊರಗಡೆಯಿಂದ ಬರತಕ್ಕದ್ದು 600 ಮೆಗಾವ್ಯಾಟ್. ಹೀಗೆ ಒಟ್ಟು 3000 ಮೆಗಾವ್ಯಾಟ್ ನಮ್ಮಲ್ಲಿ ಇರತಕ್ಕ ವಿದ್ಯುಚ್ಛಕ್ತಿ. ಆದರೆ ಇದನ್ನು ಹೇಗೆ ನಾವು ಮ್ಯಾನೇಜ್ ಮಾಡಬೇಕು? ಕೆಲವು ಜಿಲ್ಲೆಗಳಿಗೆ ಕೊಟ್ಟಾಗ ಅದನ್ನು ಸಮವಾಗಿ ಹಂಚಬೇಕಲ್ಲಾ. ಒಟ್ಟು 10,000 ಮೆಗಾವ್ಯಾಟ್ ಬೇಕಾದರೆ ನಮ್ಮ ಹತ್ತಿರ ಇರತಕ್ಕದ್ದು 3000 ಮೆಗಾವ್ಯಾಟ್. ಅವನಿಗೆ ಕೊಟ್ಟಾಗ ನೀವು ಸುಮ್ಮನೆ ಇರು, ನಿನಗೆ ಕೊಟ್ಟಾಗ ಅವನು ಸುಮ್ಮನಿರು ಎಂದು ಹೇಳಿ ಹಂಚಿದರೆ ಆಗುತ್ತದೆಯೇ ಹೊರತು ಸಮವಾಗಿ ಎಲ್ಲರಿಗೂ ಒಂದೇ ಸಾರಿ ಹಂಚುತ್ತೇವೆಂದರೆ ಆಗುವುದಿಲ್ಲ. ರೈತರ ಹತ್ತಿರ ಮೊದಲು ಇದ್ದದ್ದು ಒಂದೂವರೆ ಲಕ್ಷ ಪಂಪುಸೆಟ್ಟುಗಳು. ನಮ್ಮ ಕಾಲದಲ್ಲಿ 5 ವರ್ಷಕ್ಕೆ 6 ಪರ್ಸೆಂಟ್ ಇದ್ದುದ್ದು 16 ಪರ್ಸೆಂಟ್ ಕನ್ಸಮೆಷನ್ಸ್ ಹೋಯಿತು. ನಾವು 5 ಲಕ್ಷಕ್ಕೆ ಏರಿಸಿದೆವು. ಈಗ 9 ಲಕ್ಷ ಪಂಪು ಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿದ್ದಾರೆ. ಆಗ ಪ್ರತಿಯೊಂದು ಪಂಪುಸೆಟ್ಟಿಗೆ ಒಂದು ದಿನಕ್ಕೆ 20 ಯೂನಿಟ್ ಖರ್ಚಾಗುತ್ತದೆಂಬ ಅಂದಾಜಿನ ಮೇಲೆ ನಾವು ಅವರಿಗೆ ಚಾರ್ಜ್ ಮಾಡಲಿಲ್ಲ. ಏನು ಒಂದು 20 ಯೂನಿಟ್ ಅಲ್ಲ ಎಂದು. ಆಗ ನಮ್ಮ ಜಲ ವಿದ್ಯುತ್ ಯೋಜನೆಗಳಿಂದ ಒಂದು ಯೂನಿಟ್ಟು ಬೆಲೆ 12 ಪೈಸೆ ಇತ್ತು.

ಈಗ ಥರ್ಮಲ್, ಅಟಾಮಿಕ್, ಹೈಡಲ್ ಪ್ಲಸ್ ಡೀಸಲ್ ಈ ನಾಲ್ಕೂ ಮೂಲಗಳಿಂದ ತಯಾರಾಗತಕ್ಕ ವಿದ್ಯುಚ್ಛಕ್ತಿಯ ಖರ್ಚು, ಜನರೇಷನ್ ಕಾಸ್ಟ್ 108 ಪೈಸೆ ಒಂದು ಯೂನಿಟ್ಟಿಗೆ ಅಂದರೆ ಒಂದು ರೂಪಾಯಿ ಎಂಟು ಪೈಸೆ ಖರ್ಚು ಮಾಡಿ ನಾವು ಒಂದು ಯೂನಿಟ್ ವಿದ್ಯುತ್ತನ್ನು ಜನರೇಟ್ ಮಾಡುತ್ತೇವೆ. ಉದ್ದಿಮೆದಾರರಿಗೆ 2.20, ಕೆಲವು ಸಾರಿ 2.50ಕ್ಕೆ ಕೊಡಬೇಕಾಗುತ್ತದೆ. ಯಲಹಂಕ ಪವರ್ ಇದೆಯಲ್ಲಾ ಅದನ್ನು ದುಬಾರಿ ಬೆಲೆಗೆ ಮ್ಯಾರುತ್ತೇವೆ. ರೈತರಿಗೆ ನಾವು ಏನು ಉಚಿತವಾಗಿ ಕೊಟ್ಟಿದ್ದೇವೆ. ಅದು ಕನ್ಸಮೆಷನ್ನಿನ 31 ರಿಂದ 41 ಪರ್ಸೆಂಟ್ ಆಗುತ್ತದೆ. ಒಟ್ಟು ನೂರು ಯೂನಿಟ್ ಇದ್ದರೆ ಅದರಲ್ಲಿ 40 ಯೂನಿಟ್ ರೈತರಿಗೆ ಹೋಗುತ್ತದೆ. ರೈತರು ಬೇಕೆಂದು ಉರಿಸುತ್ತಾರೆಂದು ಅಲ್ಲ. ನಮ್ಮ ಸಿಸ್ಟಂನಲ್ಲಿ ಏನಿದೆ ಅದನ್ನು ರೆಗ್ಯುಲೇಟ್ ಮಾಡತಕ್ಕ ಅಥವಾ ಅದಕ್ಕೆ ಮೀಟರ್ ಹಾಕಿ ಕಂಟ್ರೋಲ್ ಮಾಡತಕ್ಕದ್ದು ಇಲ್ಲ. ನಾನೇ ಸ್ವತಃ ಪಂಪುಸೆಟ್ಟು ಇಟ್ಟುಕೊಂಡಿದ್ದೇನೆ. ನಾನು ಮೋಟಾರ್ ಸುಟ್ಟುಕೊಂಡು ಬೇಕಾದರೆ ದಂಡ ಕೊಡುತ್ತೇನೆಯೇ ಹೊರತು ರೆಗ್ಯುಲೇಟೆಡ್ ಪವರ್ ಬರುವ ಹಾಗೆ ನಾನು ಪವರ್ ಅನ್ನು ಮೆನ್ ಟೇನ್ ಮಾಡುವುದಿಲ್ಲ. ಬೆಳಿಗ್ಗೆ ಒಳ್ಳೆಯ ಹೊತ್ತಿನಲ್ಲಿ ಕರೆಂಟ್ ಹೋದರೆ ನಿಮಗೆ ಹೇಗೆ ಅನ್ನಿಸುತ್ತದೆ. ಬಹಳ ಇರಿಟೇಷನ್ ಆಗುತ್ತದೆ. ನಾನು ನಮ್ಮ ಮನೆಯಲ್ಲಿ ಎರಡು ಲ್ಯಾಟಿನ್ಗಳನ್ನು ಇಟ್ಟುಕೊಂಡಿದ್ದೇನೆ. ಇದು ಅನಿವಾರ್ಯ. ಏಕೆಂದರೆ ಕ್ಯಾಂಡಲ್ ಉರಿಸಿಕೊಂಡು ಬಹಳ ಹೊತ್ತು ಇರುವುದಕ್ಕಾಗುವುದಿಲ್ಲ. ನಮ್ಮ ಮನೆಯಲ್ಲಿ 2-3 ದಿನ ಎಲೆಕ್ಟ್ರಿಸಿಟಿ ಹೋಯಿತು, ಬರಲೇ ಇಲ್ಲ, ಏತಕ್ಕೆ ಹೋಯಿತು ಏನು ಎಂದು ಉತ್ತರ ಹೇಳುವುದಕ್ಕೆ ಯಾರೂ ಬರಲಿಲ್ಲ. ಆದುದರಿಂದ ಎಲೆಕ್ಟ್ರಿಸಿಟಿ ಉತ್ಪಾದನೆಯ ಖರ್ಚು, ಟ್ರಾನ್ಸ್ಮಿಷನ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಇವೆಲ್ಲರನ್ನೂ ತಳದಿಂದ ತುದಿಯವರೆಗೆ ಸೇರಿ ಮಾಡಬೇಕಾಗಿದೆ.

7.55 ಪಿ.ಎಂ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಉಪಮುಖ್ಯಮಂತ್ರಿಗಳೇ, ಹೊರಗಡೆ ತಮ್ಮ..

ಉಪಾಧ್ಯಕ್ಷರು : ಸ್ವಲ್ಪ ಕುಳಿತುಕೊಳ್ಳಿ. ಶಂಕರಲಿಂಗೇಗೌಡರೇ, ಸ್ವಲ್ಪ ಕೇಳಿ. ಇದು ಟೆಕ್ನಿಕಲ್ ಸಬ್ಜೆಕ್ಟ್. ಸಮಾಧಾನದಿಂದ ಕೇಳಿ.

ಶ್ರೀ ಜೆ.ಎಚ್. ಪಟೇಲ್ : ನೀವು ಇತ್ತೀಚೆಗೆ ವಿಧಾನಸಭೆಗೆ ಬಂದಿದ್ದೀರಿ. ವಿಷಯ ತಿಳಿದುಕೊಳ್ಳಿ. ಎಲೆಕ್ಟ್ರಿಸಿಟಿ ಅದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲೆಕ್ಟ್ರಿಸಿಟಿ ಅಂದರೆ ಶಾಕ್ ಹೊಡೆಯುತ್ತದೆಯೇ?

ಶ್ರೀ ಜೆ.ಹೆಚ್. ಪಟೇಲ್ : ನಾನು ನಾಗರಾಜ್ ಅವರಿಗೆ ಹೇಳುವುದು, ಹಿರಿಯ ಸದಸ್ಯರಿಗೆ ಹೇಳುವುದು, ನೋಡುವುದಕ್ಕೆ Power position is comfertable. ನಾವು ಪವರ್ ಕಟ್ ಮಾಡಿಲ್ಲ ಅಥವಾ ಲೋಡ್ ಶೆಡ್ಡಿಂಗ್ ಮಾಡಿಲ್ಲ. ಈಗ ಹೈ ಟೆನ್ಷನ್ ಯೂಸರ್ಸ್ ಬಗ್ಗೆ ಹೇಳಿದಿರಿ ನೀವು. ಹೈ ಟೆನ್ಷನ್ ಯೂಸರ್ಸ್ಗೆ ಪವರ್ ಕಟ್ ಮಾಡಿದರೆ ಅವರ ಇಂಡಸ್ಟ್ರೀಸ್ ಕ್ಲೋಸ್ ಆಗುತ್ತವೆ. ಆಕ್ಚುಯಲಿ ಕೆ.ಇ.ಬಿ. ಖರ್ಚನ್ನು ವಸೂಲು ಮಾಡುವುದು ಹೈ ಟೆನ್ಷನ್ ಯೂಸರ್ಸ್ನಿಂದ. ನಾವು ಇವತ್ತು ಧಾರಾಳವಾಗಿ ಸಬ್ಸಿಡೈಸ್ ಮಾಡಿರುವುದು ಇನ್ನೊಂದು ವರ್ಗಕ್ಕೆ. ಈ ಮಧ್ಯೆ ಇನ್ನೊಂದು ವರ್ಗ ಇದೆ. ಅದು ರೈತರಿಗೆ ಬೇಕಾದಂಥ ಎಲೆಕ್ಟ್ರಿಸಿಟಿಗೆ ನಾವು ಚಾರ್ಜ್ ಮಾಡಿಲ್ಲ. ಸಾಮಾನ್ಯ ಗ್ರಾಹಕರು ಯಾರಿದ್ದಾರೆ ಅವರಿಗೆ ಅಂದರೆ ಗೃಹಬಳಕೆಗೆ ಉಪಯೋಗಿಸುವವರಿಗೆ 55 ಪೈಸೆ ಚಾರ್ಜ್ ಮಾಡುತ್ತೇವೆ. ಕಾಸ್ಟ್ ಆಫ್ ಪ್ರೊಡಕ್ಷನ್ ಇರುವುದು 108

ಪೈಸೆ. ಎ.ಇ.ಎಚ್.ನವರಿಗೆ ಸ್ವಲ್ಪ ಜಾಸ್ತಿ ಮಾಡುತ್ತೇವೆ. ಮತ್ತು ಏರ್ ಕಂಡೀಷನರ್ ಇಂಥ ಲಕ್ಸುರೀಸ್ನವರಿಗೆ ಎರಡು ರೂಪಾಯಿಯವರೆಗೂ ಛಾರ್ಜ್ ಮಾಡುತ್ತೇವೆ. ಆದ್ದರಿಂದ ನಮ್ಮ ಸಿಸ್ಟಂ ಆಫ್ ಟ್ರೀಟಿಂಗ್ ಅಂದರೆ ಎಲ್ಲಾ ಜನರನ್ನೂ ಒಂದೇ ತರಹ ನೋಡುವುದಕ್ಕಾಗುವುದಿಲ್ಲ, ನಾನು ಹೇಳಿದ್ದೇನು? ರೈತರಿಗೆ ನಾಳೆ ಬೆಳಕು ಹರಿಯುವ ಹೊತ್ತಿಗೆ ನಾವು ಬಿಲ್ ಕಳುಹಿಸುತ್ತೇವೆ ಎಂದು ಅಲ್ಲ.

ರೈತರನ್ನು ಕರೆದು ಇವತ್ತು ಇಷ್ಟು ವಿದ್ಯುಚ್ಛಕ್ತಿ ಉಪಯೋಗವಾಗುತ್ತಿದೆ, ಅದರ ಮೈಂಟೆನೆನ್ಸ್ ಕಾಸ್ಟ್ ಕೂಡ ವಾಪಸ್ ಬರುತ್ತಿಲ್ಲ ಯಾವಾಗ ಸಿಸ್ಟಂ ಆಫ್ ಡಿಸ್ಟ್ರಿಬ್ಯೂಷನ್ ಮತ್ತು ಟ್ರಾನ್ಸ್ಮಿಷನ್ ಕೊಲ್ಯಾಪ್ಸ್ ಆಗುತ್ತದೆ, ನಿಮಗೆ ಪರ್ಮನೆಂಟಾಗಿ ಮೋಟಾರ್ ಸುಡುತ್ತದೆ. ಈಗ ದಿವಸ ಒಂದು ಸಾರಿ ರೀವೈಂಡಿಂಗ್ ಮಾಡಿಸುತ್ತೀರಿ. ಆಮೇಲೆ ಪರ್ಮನೆಂಟಾಗಿ ಸುಡುತ್ತದೆ. ಆ ನಾಲ್ಕೈದು ಸಾವಿರ ರೂಪಾಯಿ ದಂಡ ಕೊಡುತ್ತೀರಲ್ಲಾ ಅದನ್ನು ಕೊಡುವ ಬದಲು ಕೆ.ಇ.ಬಿ.ಗೆ 25 ಪೈಸೆ ಕೊಡಿ; ಬೇರೆಯವರು 2 ರೂಪಾಯಿ ಕೊಟ್ಟರೆ ನೀವು 10 ಪೈಸೆ ಕೊಡಿ ಎಂದು ಹೇಳುತ್ತಿದ್ದೇನೆ. ನಾನೂ ರೈತ. ನನಗೂ ಗೊತ್ತಿದೆ. ನಮ್ಮ ಕೆ.ಇ.ಬಿ.ಯನ್ನು ನೀವು ಉಳಿಸಿಕೊಳ್ಳದೇ ಹೋದರೆ, ಅದು ಸತ್ತುಹೋದರೆ ಬಹಳ ಅಪಾಯವಾಗುವುದು ಯಾರಿಗೆ? ನಿಮಗೆ. ಇಂಡಸ್ಟ್ರೀಸ್ನವರು ಇರಲಿ. ನಾಲ್ಕೈದು ಕಾರಣಗಳಿವೆ ಖರ್ಗೆಯವರೆ. ಬೆಂಗಳೂರು ಒಂದಕ್ಕೇ 700ರಿಂದ 800 ಮೆಗಾವ್ಯಾಟ್ಸ್ ಪವರ್ ಬೇಕು. ಯಲಹಂಕ ಹತ್ತಿರ ಒಂದೇ ಒಂದು ಜನರೇಟಿಂಗ್ ಸ್ಟೇಷನ್ ಇದೆ. ಅಲ್ಲಿ 120 ಮೆಗಾವ್ಯಾಟ್ಸ್ ಉತ್ಪಾದನೆಯಾಗುತ್ತದೆ. ಎಲ್ಲಿಂದ ಬರಬೇಕು? 450 ಕಿಲೋಮೀಟರ್ ದೂರದಿಂದ ಎಲೆಕ್ಟ್ರಿಸಿಟಿ ಬರಬೇಕು. ರಾಯಚೂರಿನಿಂದ 400 ಕೆ.ವಿ. ಲೈನ್ 220 ಕೆ.ವಿ. ಲೈನ್, 110 ಕೆ.ವಿ.ಲೈನ್ ಇದೆ. ಇದೇನೆಂದರೆ ನೀರು ಹಾಯಿಸುವುದಕ್ಕೆ ಮೇಜರ್ ಕೆನಾಲ್ ತೆಗೆಯುತ್ತಾರೆ. ಆಮೇಲೆ ಡಿಸ್ಟ್ರಿಬ್ಯೂಟರ್ ತೆಗೆಯುತ್ತಾರೆ, ಹಾಗೆ ಇದು. 400 ಹೈಯೆಸ್ಟ್ ಕೆಪಾಸಿಟಿ. 220, ಅಲ್ಲಿಂದ 110, 66,33 ಮತ್ತು 11. ಮನೆಗಳಿಗೆ ದೀಪ ಕೊಡುವುದಕ್ಕೆ 11 ಕೆ.ವಿ. ಲೈನ್ ಸಾಕು. ಇಂಡಸ್ಟ್ರೀಸ್ಗೆ ಸ್ವಲ್ಪ ಹೈಯರ್ ಓಲ್ಟೇಜ್ ಬೇಕು. ಓಲ್ಟೇಜ್ ಅಂದರೆ ಅದರ ಗುಣ. ಕ್ವಾಂಟಂ ಅಲ್ಲ. ವಿದ್ಯುಚ್ಛಕ್ತಿ ದಿವಸ 60 ಮಿಲಿಯನ್ ಯೂನಿಟ್ ಬೇಕು. ದಿವಸ 60 ಮಿಲಿಯನ್ ಯೂನಿಟ್ ಜನರೇಟ್ ಮಾಡಬಹುದು. ಆದರೆ ಓಲ್ಟೇಜ್ ಇಲ್ಲದೆ ಇದ್ದರೆ ಬೆಂಗಳೂರು ನೀರು ಸರಬರಾಜು ನಿಂತುಹೋಗುತ್ತದೆ. ಅದಕ್ಕೆ ಬೇಕಾದ ಶಕ್ತಿಯ ವಿದ್ಯುಚ್ಛಕ್ತಿ ಬರದೇಹೋದರೆ ವಿದ್ಯುಚ್ಛಕ್ತಿ ಪ್ರಯೋಜನ ಇಲ್ಲ. ಆದ್ದರಿಂದ ಮೇಜರ್ ಕೆನಾಲ್ನಿಂದ ಬಂದ ನೀರು ಡಿಸ್ಟ್ರಿಬ್ಯೂಟರ್ಸ್ಗೆ ಹೋಗಬೇಕಾದರೆ ಅದು ಯಾವ ಲೆವೆಲ್ನಲ್ಲಿ ಹರಿಯಬೇಕೋ ಆ ಲೆವೆಲ್ನಲ್ಲಿ ಇದ್ದರೆ ಅದಕ್ಕೆ ತೂಕ ಬರುತ್ತದೆ. ನಮಗೆ 3 ಸೆಂಟರ್ಸ್ ಇವೆ. ರಾಯಚೂರು ಒಂದಿದೆ. ವೆಸ್ಟರ್ನ್ ಘಾಟ್ಸ್ ಕಡೆ ಶರಾವತಿ ಅಂದರೆ ಲಿಂಗನಮಕ್ಕಿ ಡ್ಯಾಮ್ ಮತ್ತು ವರಾಹಿ. ಇವು ಜಲವಿದ್ಯುತ್ ಯೋಜನೆಗಳು. ರಾಯಚೂರು ಶಾಖೋತ್ಪನ್ನದಿಂದ ವಿದ್ಯುಚ್ಛಕ್ತಿ ನಾವು ಜನರೇಟ್ ಮಾಡತಕ್ಕದ್ದು ಈಗ ನಾಲ್ಕು ಯೂನಿಟ್ ಪ್ರತಿಯೊಂದರಲ್ಲಿ 210 ಮೆಗಾವ್ಯಾಟ್ ತಯಾರಾಗುತ್ತದೆ. ಅದರಲ್ಲಿ ಮೂರನ್ನೇ ನಾವು ರನ್ ಮಾಡುತ್ತಿದ್ದೇವೆ. ಎಂಥ ವಿಚಿತ್ರ ಅಂದರೆ ಇವತ್ತು ನಾಲ್ಕನೇ ಯೂನಿಟ್ ರಾಯಚೂರಿನಲ್ಲಿದೆ.

ಜನರೇಟ್ ಮಾಡಬಹುದು, ಜನರೇಟ್ ಮಾಡಿದರೆ ಅದನ್ನು ಇವ್ಯಾಕ್ಯುಯೇಟ್ ಮಾಡತಕ್ಕ ಲೈನ್ ಇಲ್ಲ. ರಾಯಚೂರು ಥರ್ಮಲ್ ಪ್ಲಾಂಟ್ನಿಂದ ಬೆಂಗಳೂರಿಗೆ ನೇರವಾಗಿ ಬರತಕ್ಕ 400 ಕೆ.ವಿ. ಲೈನು ಸಧ್ಯದಲ್ಲಿ ಆಗುತ್ತದೆ. ಒಂದು ತಿಂಗಳಲ್ಲಿ ಆಗಬಹುದು. 2 ತಿಂಗಳಲ್ಲಿ ಆಗಬಹುದು. ಹೀಗೆ ನಾನು ಕೆ.ಇ.ಬಿ. ಆಫೀಸರ್ಸ್ ಜೊತೆ ಅವರು ಹೇಳಿದ ಮೇಲೆ ಮಾತನಾಡಿದೆ. ಇದು ಹೇಗಿದೆ ಅಂದರೆ ನಮ್ಮಲ್ಲಿ ಅಕ್ಕಿ ಇದೆ. ಆದರೆ ಒಟ್ಟಿಗೇ ಬಂದರೆ ಯಾರಿಗೂ ಊಟಕ್ಕೆ ಹಾಕುವುದಕ್ಕೆ ಆಗುವುದಿಲ್ಲ,

10-10 ಜನ ಬಂದರೆ ಅಡಿಗೆ ಮಾಡಿ ಹಾಕುತ್ತೇವೆ ಎಂದು ಹೇಳಿದ ಹಾಗೆ ಆಯಿತು. ಜಲಾಶಯಗಳಲ್ಲಿ ನೀರು ಇದೆ. We will convert it into electricity. ರಾಯಚೂರು ಥರ್ಮಲ್ ಪ್ಲಾಂಟ್ನಲ್ಲಿ ಯುನಿಟ್ ರೆಡಿ ಇದೆ. we can generate another 210 MW. ಆದರೆ ಇವ್ಯಾಕ್ಯುಯೇಟ್ ಮಾಡತಕ್ಕ ಲೈನು ಇಲ್ಲ. The transmission and distribution system is totally inadequate to give satisfactory electricity to different sections of the society. ರೈತರು ಏಕೆ ಮೋಟಾರುಗಳನ್ನು ಸುಟ್ಟು ಕೊಳ್ಳುತ್ತಾರೆ? ಯಾವುದೋ ಏರಿಯಾ, ತೆಗೆದುಕೊಳ್ಳಿ. ಕೋಲಾರ ಜಿಲ್ಲೆ ನಮಗೆ ಸರಿಯಾಗಿ ಕರೆಂಟ್ ಬರಬೇಕಾದರೆ ಇಂತಹ 4 ಸರ್ಕಲ್ಗೆ ಒಂದು ಸಬ್ ಸ್ಟೇಷನ್ ಬೇಕು. ಟೆಕ್ನಿಕಲಿ ಎಲ್ಲೋ ಉತ್ಪಾದನೆ ಮಾಡಿ ಅದನ್ನು ಸ್ಟೋರೇಜ್ ಮಾಡುವುದಕ್ಕೆ ಬರುವುದಿಲ್ಲ, ಆ ಸೆಕೆಂಡಿಗೇ ಅದು ಯೂಸ್ ಆಗಬೇಕು. ಇಷ್ಟು ಮೆಗ್ಯಾವಾಟ್ ಪವರ್ನು ಜನರೇಟ್ ಮಾಡುತ್ತೇವೆಂದರೆ, ಅದು ತಕ್ಷಣ ಯೂಸ್ ಆಗಲೇಬೇಕು. ಸ್ಟಾಕ್ ಮಾಡುವುದಕ್ಕೆ ಬರುವುದಿಲ್ಲ. One thing in the world. Electricity cannot be stored. ಅದನ್ನು ಯೂಸ್ ಮಾಡುವುದಕ್ಕೆ ಇಲ್ಲದಿದ್ದರೆ ನಾವು ಜನರೇಟ್ ಮಾಡುವುದಕ್ಕಾಗುವುದಿಲ್ಲ, ಇದೊಂದು ವಿಚಿತ್ರ ಕರೆಂಟಿನದ್ದು. ಬೆಂಗಳೂರಿನಲ್ಲಿ ಓಲ್ಟೇಜ್ ಲೋ ಆಯಿತು ಎಂದು ಹೇಳಿದರೆ, ಜೋಗ್ನಲ್ಲಿ ಒಂದು ಜನರೇಟರನ್ನು ಓಡಿಸುವುದಕ್ಕಾಗುವುದಿಲ್ಲ.

That is the technical difficulty. ಇಲ್ಲಿ ಓಲ್ಟೇಜ್ ಡ್ರಾಪ್ ಏಕೆ ಆಗುತ್ತದೆಂದರೆ, ರಾಮಗೊಂಡಂನಿಂದ ಬರತಕ್ಕಂತಹದ್ದು. ಮಾನ್ಯ ಸದಸ್ಯರವರು ಹೇಳಿದ್ದುದು ನಿಜ. ಅವರು ಆಂಧ್ರದವರು ನಮಗೆ ಬಹಳ ಅಸಹಕಾರ ಮಾಡುತ್ತಿದ್ದಾರೆ. ಬಹಳ ಅಸಹಕಾರ. ಬರತಕ್ಕ ಲೈನು ಏನು ಇದೆ, ಮಧ್ಯ ಮಧ್ಯ ಅಲ್ಲಲ್ಲಿ, ಕಡಪದ ಹತ್ತಿರ ಒಂದೇ ಸಾರಿ ಪಂಪುಸೆಟ್ಟುಗಳನ್ನೆಲ್ಲಾ ಆನ್ ಮಾಡುತ್ತಾರೆ. 400 ಕೆ.ವಿ. ಕೆಪಾಸಿಟಿಯ ಎಲೆಕ್ಟ್ರಿಸಿಟಿ 300ಕ್ಕೆ ಡ್ರಾಪ್ ಆಗುತ್ತದೆ. ಅಲ್ಲಿಂದ ಬೆಂಗಳೂರಿಗೆ ತಲುಪುವ ಹೊತ್ತಿಗೆ 250ಕ್ಕೆ ಇಳಿಯುತ್ತದೆ. ಆಗ ನಮ್ಮ ಮೋಟಾರುಗಳು ವರ್ಕ್ ಆಗುವುದಿಲ್ಲ. ಆದರೆ ಒಂದು ಪಂಪ್ ಹೌಸ್ನು ಮಾಡುವಾಗ ಜಲಮಂಡಳಿಯವರು ಹಿಂದೆ ಕೆ.ಇ.ಬಿ. ಯವರ ಸಲಹೆಯನ್ನು ಕೇಳಿ ಕೆಲವು ಕ್ರಮಗಳನ್ನು ಕೈಗೊಂಡಿದ್ದರೆ ಈ ತೊಂದರೆ ಬರುತ್ತಿರಲಿಲ್ಲ, ಆಮೇಲೆ ಅವರ ಹತ್ತಿರವೂ ಮಾತನಾಡುತ್ತೇನೆ. ಆದರೆ ಇವತ್ತು ಎಲ್ಲಾ ಕಡೆ, ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಎಲೆಕ್ಟ್ರಿಸಿಟಿಯಿಂದ ತೊಂದರೆಯಾಗಿದೆ.

ರೈತರಿಗೆ ಆಗಿದೆ. ಸಣ್ಣ ಕಾರ್ಖಾನೆಗಳವರಿಗೆ ಆಗಿದೆ. ಯಾವುದೋ ಒಂದು ಇಂಡಸ್ಟ್ರೀಯಲ್ ಶೆಡ್ಡಿಗೆ ಹೋಗಿದ್ದೆ. ಪವರ್ ಕಟ್ ಎಂದು ಅವರು ಹೇಳಿದರು. ಅದು ಬಿಸ್ಕೆಟ್ ಫ್ಯಾಕ್ಟರಿ. ಆ ಬಿಸ್ಕಟ್ ಫ್ಯಾಕ್ಟರಿಯಲ್ಲಿ ಬಿಸ್ಕತ್ ಹಾಕಿ ಆ ಯಂತ್ರ ಹೋಗುತ್ತಾ ಇರುತ್ತದೆ. ಆಗ ಪವರ್ ಕಟ್ ಆಗಿಬಿಟ್ಟರೆ ಅದು ಮತ್ತೆ ಮುದ್ದೆಯಾಗುತ್ತದೆ. It cannot be converted into biscuit. ಹೀಗೆ ಪವರ್ 2-3 ಸಲ ಹೋಯಿತು ಅಂದರೆ ಅವನೇ ಬಿಸ್ಕತ್ ಆಗುತ್ತಾನೆ. ಅವನು ಸತ್ತ. ಹೀಗೆ ಕಂಟಿನ್ಯೂಯಸ್ ಪ್ರೊಸಸ್ ಇರತಕ್ಕ ಸಣ್ಣ ಸಣ್ಣ ಇಂಡಸ್ಟ್ರೀಸ್ಗಳಿಗೆ ಈ ತೊಂದರೆ ಇದೆ. ಗ್ಲಾಸ್ ಇಂಡಸ್ಟ್ರೀಸ್ನಲ್ಲಿ ಅದು ಕಾದು ಲಿಕ್ವಿಡ್ ಫಾರಂನಲ್ಲಿ ಬರುತ್ತಾ ಇರುತ್ತದೆ ಅದು ಕನ್ವರ್ಟ್ ಆಗುವುದಕ್ಕಿಂತ ಮುಂಚೆ ಎಲೆಕ್ಟ್ರಿಸಿಟಿ ಆಫ್ ಆದರೆ ಅದು ಕಲ್ಲು ಆಗಿಬಿಡುತ್ತದೆ. ಕಂಟಿನ್ಯೂಯಸ್ ಆಗಿ ಎಲೆಕ್ಟ್ರಿಸಿಟಿ, ಓಲ್ಟೇಜ್ ಇದ್ದರೆ ಮಾತ್ರ ನಡೆಯತಕ್ಕ ಇಂಡಸ್ಟ್ರೀಸ್ಗಳು ಇವು. ಆದರೆ ಅವರು ಏನು ಹೇಳುತ್ತಾರೆ, ನೀವು ಚಾರ್ಜ್ ಬೇಕಾದರೆ 50 ಪೈಸೆ ಹೆಚ್ಚು ಮಾಡಿ. ಆದರೆ ಓಲ್ಟೇಜ್ ಫ್ಲಕ್ಚುಯೇಷನ್ ಆಗದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳುತ್ತಾರೆ. ಆ ಕಂಟಿನ್ಯಯಿಟಿ ಮತ್ತು

ಫ್ಲಕ್ಚುಯೇಷನ್ ಕಂಟ್ರೋಲ್ ಮಾಡುವುದಕ್ಕೆ we have to invest more than 800 crores of rupees minimum, this year;

ಇದಕ್ಕೆ ನಾವು ಇನ್ವೀಸ್ ಜನರೇಟಿಂಗ್ ಸಿಸ್ಟಂ ಅಂಡ್ ಸಿಸ್ಟಂ ಇಂಪ್ರೂವ್ಮೆಂಟ್ ಎಂದು ಕರೆಯುತ್ತೇವೆ. ಇವೆರಡೂ ಜೊತೆ ಜೊತೆಯಾಗಿ ಹೋದರೆ ಮಾತ್ರ ನಾವು ಅಶ್ಯೂರ್ ಮಾಡಬಹುದೇ ಹೊರತು ಇಲ್ಲದಿದ್ದರೆ ಯಾರ ಕೈಯಲ್ಲೂ ಇದನ್ನು ಮೈಸಿಟೇನ್ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ನಾನು ಅಧಿಕಾರಿಗಳದ್ದು ತಪ್ಪು, ಅಥವಾ ಹಿಂದೆ ಇದ್ದವರದ್ದು ತಪ್ಪು ಎಂದು ನಾನು ಯಾರ ಮೇಲೂ ಗೂಬೆ ಕೂರಿಸುವುದಕ್ಕೆ ಹೋಗುವುದಿಲ್ಲ. ಆದರೆ ವಸ್ತು ಸ್ಥಿತಿ ಹೀಗಿದೆ. ಇದನ್ನು ಸರಿಪಡಿಸುವುದಕ್ಕೋಸ್ಕರ ನಾವು ಹೊರಗಡೆಯಿಂದ ಪವರ್ ಜನರೇಟ್ ಮಾಡುವುದಕ್ಕೋಸ್ಕರ ಬಂಡವಾಳಗಾರರು ಬನ್ನಿರಿ ಅಂದರೆ ಬರುವುದಕ್ಕೆ ತಯಾರು ಇದ್ದಾರೆ. ಪವರ್ನು ಜನರೇಟ್ ಮಾಡುವುದಕ್ಕೆ ಬಂಡವಾಳ ಹಾಕುವವರು ಏತಕ್ಕೆ ಏಕೆ ಹಾಕುತ್ತಾರೆ. ಅವರಿಗೆ ನಮ್ಮ ಮೇಲಿನ ಪ್ರೀತಿಯಿಂದಲ್ಲ, ಲಾಭ ಮಾಡಿಕೊಳ್ಳುವುದಕ್ಕೆ.

ಅದಕ್ಕೋಸ್ಕರ ಯಾರೇ ಬಂದರೂ, ಬೇರೆ ದೇಶದವರು ಬರಲಿ, ಬೇರೆ ರಾಜ್ಯದವರು ಬರಲಿ, ನಮಗೆ ಎಲ್ಲರೂ ಒಂದೇ ಸಾರಿ ಸ್ವಿಚ್ ಆನ್ ಮಾಡಿದರೆ 10 ಸಾವಿರ ಮೆಗಾವ್ಯಾಟ್ಸ್ ಡಿಮಾಂಡ್ ಇದೆ. ಆದರೆ ನಮ್ಮ ಹತ್ತಿರ ಇರುವುದು 3 ಸಾವಿರ ಮೆಗಾವ್ಯಾಟ್ಸ್. ಆದ್ದರಿಂದ 10 ಸಾವಿರ ಮೆಗಾವ್ಯಾಟ್ಸ್ ಕೆಪಾಸಿಟಿಗೆ ಏರಿಸಬೇಕಾದರೆ ಹೋದ ಸರ್ಕಾರದಲ್ಲಿ ಕೆಲವು ಪ್ರಮುಖರು ಮಾತನಾಡುವಾಗ ಅಥವಾ ಹಿಂದಿನ ಮುಖ್ಯಮಂತ್ರಿಗಳು ಮಾತನಾಡುವಾಗ ಈ ವಿಷಯದ ಪೂರ್ಣ ಪರಿಜ್ಞಾನ ಇತ್ತೋ ಇಲ್ಲವೋ ಗೊತ್ತಿಲ್ಲ. 7 ಸಾವಿರ ಮೆಗಾವ್ಯಾಟ್ಸ್ ಒಂದೇ ಸಾರಿ ಎಂದರೆ 7 ಸಾವಿರ ಮೆಗಾವ್ಯಾಟ್ಸ್ ಇನ್ವೀಸ್ ಮಾಡುವುದು ಎಂದರೆ ಯಾವ ಮೂಲಕ? ನೀವು ಅಟಾಮಿಕ್ ಎನರ್ಜಿ ರಿಯಾಕ್ಟರ್ ಹಾಕಿದರೆ 10 ವರ್ಷ ಬೇಕು. ಥರ್ಮಲ್ ಪ್ಲಾಂಟ್ನು ಹೈಯರ್ ಕೆಪಾಸಿಟಿಯಲ್ಲಿ ಹಾಕಲು 5 ವರ್ಷ ಬೇಕು with every expeitise ಆಯಿಲ್ ಬೇಸ್ಡ್ ಡೀಸೆಲ್ ಪ್ಲಾರ್ಟ್ಸ್ ಹಾಕಲು 2-3 ವರ್ಷ ಬೇಕು. ಹೈಡಲ್ಗೆ 5-6 ವರ್ಷ ಬೇಕು. ಈಗ ನಮ್ಮಲ್ಲಿ ಹೈಡಲ್ 2-3 ಇದ್ದಾವೆ. ಯಾವುದೇ ಕಾರಣದಿಂದ, ಯಾವುದೇ ಜಾದೂ ಶಕ್ತಿಯಿಂದ ಅವನ್ನು ಮಾಡಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ನಮಗೆ 10 ಸಾವಿರ ಮೆಗಾವ್ಯಾಟ್ಸ್ ವಿದ್ಯುತ್ ಉತ್ಪಾದನೆ ಬೇಕಾಗಿದೆ. ಮತ್ತೆ ಉತ್ಪಾದನೆ 3 ಸಾವಿರ ಏನು ಹೇಳುತ್ತಿದ್ದೀರಿ ಅದು ವಸ್ತುಸ್ಥಿತಿ ಕೂಡ ಇದೆ. ಇವತ್ತು ತಮ್ಮಲ್ಲಿ ಏನು ಮಾಹಿತಿ ಇದೆ, ನಮಗೂ ಹಿಂದೆ ಅದೇ ಮಾಹಿತಿಯನ್ನು ಅಧಿಕಾರಿಗಳೇ ಒದಗಿಸಿ ಕೊಟ್ಟಿದ್ದುದು. ನಾವು ಹೇಳಿದ್ದು ನಾವು ಸ್ವಂತವಾಗಿ ತಯಾರು ಮಾಡಿ ಹೇಳಿದ ಅಂಕಿಅಂಶಗಳು ಅಲ್ಲ, ಯಾವ ರೀತಿ ತಯಾರು ಮಾಡುತ್ತಾರೆ ಎಂದರೆ, ತಮಗೂ ಕೂಡ ಗೊತ್ತಿದೆ, "ಎಸ್ಸಾರ್" ಅವರು ಗುಜರಾತ್ನಲ್ಲಿ ಸುಮಾರು ಎರಡು ಅಥವಾ ಎರಡೂವರೆ ವರ್ಷಗಳಲ್ಲಿ ಸುಮಾರು 1,200 ಮೆಗಾವ್ಯಾಟ್ಸ್ ವಿದ್ಯುತ್ ತಯಾರು ಮಾಡತಕ್ಕ ಕೆಪಾಸಿಟಿ ಇಟ್ಟುಕೊಂಡು ಕೆಲಸವನ್ನು ಅವರು ಮಾಡಿದರು. ಅಂತಹವರೂ ಕೆಲವು ಜನರು ಇಲ್ಲಿಗೆ ಬರಲು ತಯಾರು ಇದ್ದರು. ಇವತ್ತು ಅನೇಕ ಖಾಸಗೀ ಸಂಸ್ಥೆಗಳವರು ಸ್ವಂತವಾಗಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ತಯಾರಾಗಿ ಮುಂದೆ ಬಂದಿದ್ದಾರೆ.

ಆದರೆ ನಮ್ಮ ಕೆ.ಇ.ಬಿ. ಮತ್ತು ಪ್ರೈವೇಟ್ ಇನ್ವೆಸ್ಟ್ಮೆಂಟ್ ಮಾಡಬೇಕೆಂದು ಯಾರು ಬಂದಿದ್ದಾರೆ ಅವರಲ್ಲಿ ಸ್ವಲ್ಪ ವ್ಯತ್ಯಾಸ ಇದೆ, ಅದರ ರೇಟ್ ಏನು, ವಿತರಣೆ

ಮಾಡುವವರು ಯಾರು ಎಂಬುದರ ಬಗ್ಗೆ ವ್ಯತ್ಯಾಸ ಇದೆ. ಅವರು ಏನೋ ಉತ್ಪಾದನೆ ಮಾಡಬಹುದು. ವಿತರಣೆ ಹೇಗೆ ಮಾಡಬೇಕು ಮತ್ತು ಯಾರ ಕಂಟ್ರೋಲ್ನಲ್ಲಿ ಇರಬೇಕು. ಮತ್ತೆ ಇನ್ನೊಂದು ಹೆದರಿಕೆ ಅವರಲ್ಲಿ ಏನು ಇದೆ ಎಂದರೆ, ಇವತ್ತು ಯಾರೇ ಇನ್ವೆಸ್ಟ್ ಮಾಡಲು ಬರುವವರು ಲಾಭ ಇಲ್ಲದೇ ಮುಂದೆ ಬರುವುದಿಲ್ಲ. ಅದಕ್ಕಾಗಿ ಇವತ್ತು ಕೆಇಬಿ ಅವರು ಏನು ಹೇಳುತ್ತಾರೆ ಎಂದರೆ, ಇವತ್ತು ಪವರ್ ಕಾರ್ಪೊರೇಷನ್ನವರು ಏನು ಕೊಡುತ್ತಿದ್ದಾರೆ.

ಅದನ್ನು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಕೊಟ್ಟು ಅಲ್ಲಿ ಬರತಕ್ಕ ಹಣವನ್ನು ತೆಗೆದುಕೊಂಡು ಉಳಿದ ಪಂಪುಸೆಟ್ಟುಗಳ ಮೇಲೆ ಕನ್ಸೆಷನ್ ಮೇಲೆ ಕೊಡುತ್ತಿದ್ದಾರೆ. ಪ್ರೈವೇಟ್ನವರು ಅದನ್ನು ಕೊಡುವುದಿಲ್ಲ. ಈ ವ್ಯತ್ಯಾಸ ಇರುವ ಕಾರಣ ನಾವು ಅದರ ಜೊತೆ ನೆಗೋಷಿಯೇಟ್ ಮಾಡುವುದಕ್ಕೆ ಮಾತನಾಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದೇವೆ ಎಂದು ಹೇಳಿ ಆ ಹಂತದಲ್ಲಿಯೂ ಕೂಡ ಇದಕ್ಕೆ ಅಡೆತಡೆಗಳು ಇವೆ. ಅದನ್ನು ತಾವು ಯಾವ ರೀತಿ ಸರಿಪಡಿಸುತ್ತೀರಿ? ಇವತ್ತು ಬಹಳಷ್ಟು ಜನ ಪ್ರೈವೇಟ್ನವರು ಇನ್ವೆಸ್ಟ್ ಮಾಡಲು ಮುಂದೆ ಬಂದಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಖಾಸಗೀಯವರು ಇನ್ವೆಸ್ಟ್ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಹಿಂದಿನ ಸರ್ಕಾರಗಳು ನಾಲ್ಕು ಜನರೊಡನೆ ಮೆಮೋರ್ಯಾಂಡಮ್ ಆಫ್ ಅಂಡರಸ್ಟ್ಯಾಂಡಿಂಗ್ನ್ನು ಮಾಡಿಕೊಂಡು ಪವರ್ ಪರ್ಚೇಸ್ ಅಗ್ರಿಮೆಂಟ್ ಬಗ್ಗೆ ಒಂದು ಸಂಸ್ಥೆಯೊಡನೆ ಚರ್ಚೆ ಮಾಡಿದ್ದಾರೆ. ಇನ್ನೂ ಒಂದು ರೂಪಾಯಿ ಬಂದಿಲ್ಲ. ಒಂದು ಮೆಗಾವ್ಯಾಟ್ಸ್ ಉತ್ಪಾದನೆ ಆಗಿಲ್ಲ. ಇನ್ನೂ the power purchase agreement is going through the economic affairs Ministry.

ಅದಕ್ಕೆ ನಾವು ಒಂದು ಇಂಪ್ರೆಷನ್ ಏನು ಕೊಟ್ಟಿವು ಎಂದರೆ, ಅಮೇರಿಕಾದವರು ಬರುತ್ತಿದ್ದಾರೆ, ಜರ್ಮನರು ಬರುತ್ತಿದ್ದಾರೆ, ಎಲೆಕ್ಟ್ರಿಸಿಟಿ ಬೇಕಾದಷ್ಟು ಬರುತ್ತದೆ ತೆಗೆದುಕೊಳ್ಳಿ ಎಂದು. ಇಲ್ಲಾ ಇಲ್ಲಿಯವರೆಗೆ ಒಂದು ರೂಪಾಯಿ ಕೆಲಸ ಆಗಿಲ್ಲ. ಅದರೊಳಗೂ ಕೊಜೆಂಟ್ರಿಕ್ಸ್ ಅವರೊಡನೆ ಮಾತುಕತೆಯನ್ನು ಏನು ಆಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಈಗ ಅಗ್ರಿಮೆಂಟ್ ಮಾಡಿದಮೇಲೆ ನಾಳೆಯೇ ಉತ್ಪಾದನೆ ಆಗುತ್ತದೆಯೇ? ಎಲ್ಲರಿಗೂ ಟೈಮ್ ಬೇಕಾಗುತ್ತದೆ. ಹೇಳಿದ ತಕ್ಷಣ ಆಗುವುದಕ್ಕೆ ಅಲ್ಲಾವುದ್ದೀನ್ ಚಿರಾಕ್ ಇದೆಯೇ ಈ ರಾಜ್ಯದಲ್ಲಿ?

ಶ್ರೀ ಹೆಚ್.ಡಿ. ದೇವೇಗೌಡ : ಒಂದು ವಿಚಾರ ಹೇಳುತ್ತೇನೆ. ನನ್ನ ಹಾಗೂ ನಮ್ಮ ಉಪ ನಾಯಕರ ಮುಂದೆ ನಾನಾ ವಿಷಯಗಳು ಪ್ರೈವೇಟ್ ಇನ್ವೆಸ್ಟ್ಮೆಂಟ್ನವರ ವಿಚಾರಗಳು ಬಂದವು. ಫೈನಲ್ಲಾಗಿ ಕನ್ಫೂಡ್ ಆಗುವವರೆಗೆ ನಾವು ಪತ್ರಿಕೆಗಳಿಗೆ ಹೋಗಬಾರದು ಎಂದು ನಿರ್ಣಯ ಮಾಡಿದ್ದೇವೆ. ನಮ್ಮ ಮುಂದೆ ಬಂದಿಲ್ಲ ಎನ್ನಬೇಡಿ. ಈ ಎರಡು ವಾರಗಳಲ್ಲಿ ನಮ್ಮ ಮುಂದೆ ಬಂದಿದ್ದಾರೆ. ಇವೆಲ್ಲಾ ಹೇಳಿದರೆ ಜನಕ್ಕೆ ಏನೋ ನಾವು ದೊಡ್ಡ ಸಾಧನೆ ಮಾಡುತ್ತೇವೆ ಎಂಬ ಅಭಿಪ್ರಾಯ ಬರುತ್ತದೆ ಎನ್ನುವುದಕ್ಕೆ ಬದಲಾಗಿ, I will make an assurance here that we are not going to make unnecessary announcements till we reach the final agreement.

SRI J.H. PATEL : We will also not reach the fianl agreement unless it is beneficial to the State. We are not going to surrender to anybody.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆಯವರೂ ಯಾರೂ ಸರಂಡರ್ ಆಗಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಅನಾವಶ್ಯಕವಾಗಿ ಎಲೆಕ್ಟ್ರಿಸಿಟಿ ಹಾಳು ಮಾಡುತ್ತಿದ್ದೇವೆ. (ನಗು) ತತಕ್ಷಣ ನಾವು ಸರಿಮಾಡುತ್ತೇವೆ ಎಂದು ಹೇಳುವುದು ತಪ್ಪು ಆಗುತ್ತದೆ. ಕೋಜೆಂಟ್ರಿಕ್ಸ್ ಮೊದಲು ಅವರ ಪ್ಲಾನ್ ಏನು, ಎಲೆಕ್ಟ್ರಿಸಿಟಿ ಕ್ವಾಂಟಮ್ ಎಷ್ಟು ಇವೆಲ್ಲಾ ಚರ್ಚೆ ಆಗಿ ಈಗ ಇನ್ನೂ ಅದು ಕೇಂದ್ರ ಸರ್ಕಾರದಲ್ಲೇ ಚರ್ಚೆ ಆಗುತ್ತಾ ಇದೆ. ರಾಜ್ಯ ಸರ್ಕಾರದಿಂದ ಇಷ್ಟೇ ಹೇಳುವುದು. ಇಷ್ಟು ಖರೀದಿಗೆ 1997ನೇ ಇಸವಿಗೆ ಪರ್ ಯೂನಿಟ್ಕಾಸ್ಟ್ ಇಷ್ಟು ಆಗುತ್ತದೆ. ಅದು 2 ರೂಪಾಯಿ 70 ಪೈಸಾ ಏನೋ ಆಗುತ್ತದೆ.

ಛೇರ್ಮನ್ : ನೀವು ಮೆಮೋರ್ಯಾಂಡಮ್ ಆಫ್ ಅಂಡರ್ಸ್ಟಾಂಡಿಂಗ್ ಸೈನ್ ಮಾಡುವುದಕ್ಕೆ ಮೊದಲೇ ಮಹಾರಾಷ್ಟ್ರ ಮತ್ತು ಗುಜರಾತ್ನವರು ಇಂಡಸ್ಟ್ರೀಗೆ ಏನು ರೇಟ್ ಅವರು ಫಿಕ್ಸ್ ಮಾಡಿದ್ದಾರೆ ಆ ಟಾರೀಫ್ ಅನ್ನು ಇಂಟ್ರಡ್ಯೂಸ್ ಮಾಡಿ, ನಂತರ ಇವರ ಮೇಲೆ ಮಾಡಬಹುದು. ಮಹಾರಾಷ್ಟ್ರ ಮತ್ತು ಗುಜರಾತ್ನವರು ಇಂಡಸ್ಟ್ರೀಗಳಿಗೆ ಕರ್ನಾಟಕಕ್ಕಿಂತ ಜಾಸ್ತಿ ಚಾರ್ಜ್ ಮಾಡುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ನಾನೂ ಅದೇ ಹೇಳಿದ್ದುದು. ನಾವು ಅವರ ಹತ್ತಿರ ಪವರ್ ಕೊಂಡುಕೊಂಡರೆ ನಾವು ಯಾರಿಗೆ ಮಾಡಬೇಕು? ನಾವು ಈ ಬೆಲೆಗೆ ಅನಿವಾರ್ಯವಾಗಿ ಮಾರಲೇಬೇಕಾಗುತ್ತದೆ ಆದ್ದರಿಂದ ಅದನ್ನು ತೆಗೆದುಕೊಳ್ಳಬೇಕೆಂದು ಕೇಳುವುದು. ನೀವು ತೆಗೆದುಕೊಳ್ಳಲು ತಯಾರಿದ್ದರೆ ನಾವು ಕೊಂಡುಕೊಳ್ಳುತ್ತೇವೆ. ಇಲ್ಲದಿದ್ದರೆ ಏನು ಮಾಡುವುದು? ಇನ್ನೊಂದು ಆಲೋಚನೆ ಇದೆ. ನಾನು ನಮ್ಮ ನಾಯಕರು, ಹೆಗಡೆಯವರು ಎಲ್ಲಾ ಸೇರಿ ಆಲೋಚನೆ ಮಾಡಿದ್ದೇವೆ. ಈಗ ಯಾರು ಇನ್ವೆಸ್ಟ್ ಮಾಡುವುದಕ್ಕೆ ತಯಾರು ಇದ್ದಾರೆ, ಅವರು ಹೇಳುತ್ತಾರೆ ನಾವೇ ಬೇಕಾದರೆ ಟ್ರಾನ್ಸ್ಮಿಷನ್ ಮಾಡುತ್ತೇವೆ ಎಂದು. ಅದಕ್ಕೆ ನಾವು ಈಗ ಸಧ್ಯ ಒಪ್ಪಿಕೊಳ್ಳುವುದಿಲ್ಲ. ಅವರೇ ಟ್ರಾನ್ಸ್ಮಿಟ್ ಮಾಡಿ ಅವರೇ ವಿತರಣೆ ಮಾಡಿಕೊಂಡು ಕೆಇಬಿಗೋ ಸರ್ಕಾರಕ್ಕೋ ಏನೋ ಒಂದು ಕಮೀಷನ್ ಕೊಟ್ಟು ಬಿಡುವುದನ್ನು ನಾವು ಸಧ್ಯಕ್ಕೆ ಒಪ್ಪಿಕೊಳ್ಳಲು ತಯಾರಿಲ್ಲ. ಅದಕ್ಕೇ ನಾನು ಹೇಳಿದೆ ಬೇಕಾದರೆ ನೀವು ಇನ್ವೆಸ್ಟ್ ಮಾಡುವುದಾದರೆ, ಜನರೇಷನ್ನಲ್ಲಿ ಹೇಗೆ ಇನ್ವೆಸ್ಟ್ ಮಾಡುತ್ತೀರೋ ಹಾಗೆಯೇ ಸಿಸ್ಟಮ್ ಇಂಪ್ರೂವ್ಮೆಂಟ್ಗೂ ಇನ್ವೆಸ್ಟ್ ಮಾಡಿ, but, it should be handled by the government.

ಸರ್ಕಾರದಿಂದ ಆಗಬೇಕು. ಅದರ ಬಗ್ಗೆ ನಮ್ಮ ಹತ್ತಿರ ಮೂರು ಚಿತ್ರಗಳು ಇವೆ. ಒಂದು, ಇನ್ವೆಸ್ಟ್ ಮಾಡುವವರು, ಹೆಚ್ಚು ಜನರೇಷನ್ ಮಾಡತಕ್ಕವರು ಹೈಯರ್ ಕಾಸ್ಟ್ಗೆ ಮಾರಾಟ ಮಾಡತಕ್ಕಂಥವರು ಇಂಡಸ್ಟ್ರೀಯಲ್ ಯೂನಿಟ್ಸ್ಗೆ ಮಾಡಲಿ. ಇಂಡಸ್ಟ್ರೀಸ್ ಪ್ರೋಗ್ರೆಸ್ ಆಗಲಿ. ಇನ್ವೆಸ್ಟ್ ಮಾಡಲು ಬರುತ್ತಾರೆ. ಇಂಡಸ್ಟ್ರೀಗೂ ಇನ್ವೆಸ್ಟ್ ಮಾಡುವವರು ಬರುತ್ತಾರೆ. ಇವತ್ತು ವಿದ್ಯುತ್ ಇಲ್ಲ ಎಂದು ಬಹಳ ಇಂಡಸ್ಟ್ರೀಸ್ ಬರುತ್ತಿಲ್ಲ. ತಮಗೆ ಆಶ್ಚರ್ಯ ಆಗಬಹುದು. Our consumption for industrial use has dropped down to 28%.

ಅದಕ್ಕೆ ಇವತ್ತು ನಾವು ಯಾರಿಗೆ ಚಾರ್ಜ್ ಮಾಡುತ್ತೀವೋ ಅವರು ಇವತ್ತು ಕಡಿಮೆ ಆಗುತ್ತಾ ಆಗುತ್ತಾ ನಾವು ಉದಾರ ನೀತಿಯಿಂದ ಎಲ್ಲರಿಗೂ ನೀವು ಫ್ರೀಯಾಗಿ ಪವರ್ ತೆಗೆದುಕೊಳ್ಳಿ ಎಂದರೆ ಬಹಳ ದಿವಸ ಈ ದಾನ, ಧರ್ಮ ನಡೆಯುವುದಿಲ್ಲ. ಅದನ್ನು ರೈತರಿಗೆ ನಾವು ರೈತರ ಮಕ್ಕಳಾಗಿಯೇ ಕರೆದು ಮಾತನಾಡಿ, ಅಪ್ಪಾ ಪರಿಸ್ಥಿತಿ ಹೀಗೆ ಇದೆ, ಇದು ನಿಮ್ಮದು ಮಗು, ಉಳಿಸಿಕೊಳ್ಳುವುದಾದರೆ ನೀವೇ ಉಳಿಸಿಕೊಳ್ಳಿ ಎಂದು ನಾವು ಹೇಳಿ ಆಮೇಲೆ ನಾವು ಥಿಡೀರ್ ಬೆಲೆ ಕಳುಹಿಸುತ್ತೇವೆ ಎಂದು ಅಲ್ಲ ಹೇಳಿದ್ದುದು. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅವಸರ

ಬೇಡ. ಇದು ಪ್ರಮುಖವಾದ ವಿಚಾರ. ಇವತ್ತು ನೀರಾವರಿ ಮತ್ತು ವಿದ್ಯುಚ್ಛಕ್ತಿ. Actually power is becoming more and more essential part of life. ಹಾಗೆ ಆಗಿದೆ.

ಹಳ್ಳಿಗಾಡಿನಲ್ಲೂ ಸಹ ಇವತ್ತು ಪವರ್ ಬೇಕು. ಒಂದು ಕಾಲ ಇತ್ತು. ನಮ್ಮ ಹತ್ತಿರ ಪವರ್ ಇದೆ ಬನ್ನಿ, ಬನ್ನಿ ಎಂದು ಗುಜುರಾತ್ ಅಲ್ಲಿಂದಿಲ್ಲಿಂದ ಜನರನ್ನು ಕರೆದುಕೊಂಡು ಬಂದೆವು. ಈಗ ಹಾಗೆ ಅಲ್ಲ, Power has become part of life ಹಾಗೆ ಆಗಿದೆ. ಬೆಂಗಳೂರು ವಾಟರ್ ಸಪ್ಲೈನವರು ಸರಿಮಾಡಿಕೊಳ್ಳುವುದಾದರೆ, ಸೂಕ್ತವಾದ ವ್ಯವಸ್ಥೆಯನ್ನು ಅವರು ಮಾಡಿಕೊಳ್ಳಬೇಕಾಗುತ್ತದೆ. ಅವರು ಮೋಟಾರು ಸುಟ್ಟುಹೋಯಿತು, ಅದೇನೋ ಸುಟ್ಟುಹೋಯಿತು ಎಂದು ಹೇಳಿಕೊಂಡು ನೆಪ ಹೇಳುವುದು ಬೇಡ. ಬೆಂಗಳೂರು ಜನರಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಲಿಲ್ಲ.....

ಚೇರ್ಮನ್ : ಅವರಿಗೆ ಡೀಸೆಲ್ ಸೆಟ್ ಹಾಕಿಕೊಳ್ಳುವುದಕ್ಕೆ ಹೇಳಿ. ಕಾರ್ಪೊರೇಷನ್ನವರು ಡೀಸೆಲ್ ಸೆಟ್ ಹಾಕಿಕೊಳ್ಳಲಿ. ಇಂಡಸ್ಟ್ರಿಗಳಿಗೆ ಹೇಳಬೇಕು, ಕಾರ್ಪೊರೇಷನ್ನವರಿಗೆ ಹೇಳಬೇಕು, ಲೋಕಲ್ ಅಥಾರಿಟಿಗೆ ಹೇಳಲೇಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನವರು ಮತ್ತು ಕೆ.ಇ.ಬಿ.ನವರು ಏನು ಇಂಪ್ರೂವ್‌ಮೆಂಟ್ ಮಾಡಬೇಕೋ ಅದನ್ನು ಮಾಡಿಲ್ಲ ಅದಕ್ಕೋಸ್ಕರ ಈ ರೀತಿ ಹೇಳುತ್ತಾರೆ. ಕುಡಿಯುವ ನೀರಿಗೆ ಅಭಾವವಾಗದೆ ಹಾಗೆ ನೋಡಿಕೊಳ್ಳತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯ. ಆಮೇಲೆ ಈ ಓಲ್ಟೇಜ್ ಫ್ಲಕ್ಚುಯೇಷನ್ ಇದೆಯಲ್ಲಾ, ದಕ್ಷಿಣ ಭಾಗದಲ್ಲಿ ಅಂದರೆ, ಬೆಂಗಳೂರು, ಮೈಸೂರು, ತುಮಕೂರು, ಇಲ್ಲಿ ಜಾಸ್ತಿ. ರಾಯಚೂರು ಥರ್ಮಲ್ ಪವರ್ ಸ್ಟೇಷನ್ನಿಂದ ಸಂಪರ್ಕ ಸಿಕ್ಕುವಂತಹ ಭಾಗಗಳಲ್ಲಿ ಇಷ್ಟು ಫ್ಲಕ್ಚುಯೇಷನ್ ಇಲ್ಲ.

ಆಮೇಲೆ ನಮ್ಮ ಗ್ರಿಡ್ ಏನಿದೆ, ನಮ್ಮದು ಎಲ್ಲೋ ಒಂದು ಕಡೆ ಜನರೇಷನ್ ಇದೆ, 450 ಕಿಲೋಮೀಟರ್ ಎಳೆದುಕೊಂಡು ಹೋಗಬೇಕು. ಯಾವ ದೇಶದಲ್ಲಿಯೇ ಆಗಲಿ, ಜನರೇಟಿಂಗ್ ಸ್ಟೇಷನ್ನಿಗೆ ಹತ್ತಿರವೇ ಡಿಸ್ಟ್ರಿಬ್ಯೂಷನ್ ಇದ್ದರೆ ಟ್ರಾನ್ಸ್‌ಮಿಷನ್ ಲಾಸ್ ಕಡಿಮೆಯಾಗುತ್ತದೆ ಮತ್ತು ಇಂಡಸ್ಟ್ರೀಷನ್ ಎಫಿಷಿಯನ್ಸಿ ಕೂಡ ಇಂಪ್ರೂವ್ ಆಗುತ್ತದೆ. ನೀವು ಸದರನ್ ಗ್ರಿಡ್ ಎಂದು ಹೇಳಿದಿರಿ. ಸದರನ್ ಗ್ರಿಡ್ ಎಂದು ಆಗಿ, ಅದಕ್ಕೆ ಪವರ್ ಏನೂ ಕೊಡಲಿಲ್ಲ, ಸೆಂಟ್ರಲ್ ಎನ್ಟಿಸಿಸಿ ಇವೆ. ಆಂಧ್ರದವರು, ಅವರ ಹಿಸ್ಸೆಗಿಂತ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ. ಮೇಲಾಗಿ ಇರಿಗೇಷನ್ ಪಂಪ್ಸೆಟ್ಸ್ ಒಂದೇ ಸಾರಿ ಆನ್ ಮಾಡಿದರೆ, ನಮ್ಮ ಓಲ್ಟೇಜ್ ಎಕ್ಕಂ 290ಕ್ಕೆ ಬರುತ್ತದೆ. ಅದನ್ನು ಮಾಡಬೇಡಿ ಎಂದು ಹೇಳಿದರೆ, ಅವರಿನ್ನೂ ಕೇಳುತ್ತಾ ಇಲ್ಲ, ನ್ಯಾಷನಲ್ ಫ್ರಂಟ್ ಮಾಡುವುದಕ್ಕೆ ನಾವು ಪವರ್ ಕೊಡುತ್ತೇವೆಂದಲ್ಲ, ನ್ಯಾಷನಲ್ ಫ್ರಂಟ್ಗೂ ಪವರ್ಗೂ ಸಂಬಂಧ ಇಲ್ಲ, ನ್ಯಾಷನಲ್ ಫ್ರಂಟ್ ಇದ್ದರಷ್ಟು, ಬಿಟ್ಟರಷ್ಟು.....

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಹೇಳಿದ್ದು ಹಾಗಲ್ಲ, ನಮಗೆ ಬರತಕ್ಕಂಥ ಕರೆಂಟ್ ಕಡಿಮೆ ಮಾಡಿ ಯಾರು ಅದಕ್ಕೆ ಯೀಲ್ಡ್ ಆಗಬೇಡಿ ಎಂದು ಹೇಳಿದೆ. ನೀವು ಯಾವುದಾದರೂ ಮಾಡಿಕೊಳ್ಳಿ. ನಮ್ಮದೇನೂ ತಕರಾರು ಇಲ್ಲ, ಆದರೆ, ನಮ್ಮ ಕರ್ನಾಟಕವನ್ನು ಸ್ಯಾಕ್ರಿಫೈಸ್ ಮಾಡಬೇಡಿ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದುದು.

ಶ್ರೀ ಜೆ.ಹೆಚ್. ಪಟೇಲ್ : ಯಾವುದೇ ಫ್ರಂಟ್ ಮಾಡಿಕೊಳ್ಳಲಿ, ಏನೇ ಸ್ನೇಹ ಇರಲಿ. ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡುವಷ್ಟು ಕರೆಂಟ್ ನಮ್ಮ ಹತ್ತಿರ ಇದೆ. ಅದಕ್ಕೇನೂ ಕೊರತೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಹತ್ತಿರ ಬೇಕಾದಷ್ಟು ಕರೆಂಟ್ ಇದೆಯೆಂದು ಹೇಳುತ್ತೀರಿ. ಇದರ ವಿತರಣೆಯನ್ನು ಜಸ್ಟಿಫೈ ಆಗಿ ಮಾಡಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ನಮ್ಮ ಹತ್ತಿರ ಪೊಲಿಟಿಕಲ್ ಕರಂಟ್ ಇದೆ, ಎಲೆಕ್ಟ್ರಿಸಿಟಿ ಅಲ್ಲ.

ಚೇರ್ಮನ್ : ನಮ್ಮ ಹತ್ತಿರ ಕರೆಂಟ್ ಇದೆ ನಮ್ಮ ಕರೆಂಟ್ ಸ್ಟ್ರಾಂಗ್ ಇದೆ. ಓಲ್ಟೇಜ್ ಡ್ರಾಪ್ ಆಗುವುದಿಲ್ಲ ಎಂದು ಅವರು ಹೇಳಿದ್ದುದು.

ಶ್ರೀ ಜೆ.ಹೆಚ್. ಪಟೇಲ್ : ನಮ್ಮ ಹತ್ತಿರ ಇರುವ ಕರೆಂಟ್‌ನ್ನು ಮುಟ್ಟಿದರೆ ಗೊತ್ತಾಗುತ್ತದೆ. ಮಾನ್ಯ ಸದಸ್ಯರಿಗೆ ಇಷ್ಟು ಹೇಳುತ್ತೇನೆ. ಬಾಕಿ ವಸೂಲಿ ಬಗ್ಗೆ ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಬಾಕಿ ವಸೂಲಿ ಎಂದರೆ ಮುನಿಸಿಪಾಲಿಟಿಗಳದ್ದೇ 250 ಕೋಟಿ ಇದೆ. ಸೆಮಿ ಗವರ್ನಮೆಂಟಲ್ ಬಾಡೀಸೇ ಇವತ್ತು ಬಹಳ ಕೊಡುವುದಿದೆ. ಕೆ.ಇ.ಬಿ., ಕೆ.ಪಿ.ಸಿ.ಗೆ ಕೊಡುವುದು ಇದೆ. ಕೆ.ಪಿ.ಸಿ. ಕೋಲ್ ಇಂಡಿಯಾಕ್ಕೆ ಕೊಡುವುದು ಇದೆ. ಈ ಸಾಲಗಾರರದೇ ಒಂದು ಕಾನ್ಫರೆನ್ಸ್ ಆಗಬಹುದು. ಅದಕ್ಕೆ ಬಹಳ ಲೆಕ್ಕಾಚಾರ ಮತ್ತು ಶಿಸ್ತು ಎರಡೂ ಬೇಕು. ಹಣಕಾಸಿನ ವಿಷಯದಲ್ಲಿ ಹಿಂದೆ ಯಾವ ರೀತಿ ನಡೆದುಕೊಂಡಿದ್ದಾರೆ. ಏನು ಅವ್ಯವಹಾರ ಮಾಡಿದ್ದಾರೆ ಅದನ್ನು ಹೇಳಿದರೆ ಏನೂ ಪ್ರಯೋಜನವಿಲ್ಲ, ಅದರಿಂದ ಜನರೇಟೂ ಆಗುವುದಿಲ್ಲ, ಟ್ರಾನ್ಸ್‌ಮಿಷನ್ ಆಗುವುದಿಲ್ಲ, ಎಲ್ಲಾ ಎಲ್ಲೆಲ್ಲಿ ಹೋಗಿ ಸೇರಬೇಕೋ ಅಲ್ಲಿ ಸೇರಿದೆ. ಆದ್ದರಿಂದ, ಹಿಂದಿನ ಚಾಪ್ಟರನ್ನು ಓಪನ್ ಮಾಡದೇ, ಮುಂದೆ ನಾವು ಏನೇನು ಮಾಡಬೇಕು, ಸಿಸ್ಟಂ ಇಂಪ್ರೂವ್ ಮಾಡಬೇಕೆಂಬುದನ್ನು ಯೋಚಿಸುತ್ತಿದ್ದೇವೆ. ಈಗ ವಿದೇಶಿಯವರನ್ನು ಸಿಸ್ಟಂ ಇಂಪ್ರೂವ್‌ಮೆಂಟ್‌ನಲ್ಲಿಗೆ ಪಾರ್ಟಿಸಿಪೇಟ್ ಮಾಡಿಸಬೇಕು. ಬರೀ ಜನರೇಟ್ ಮಾಡುವುದಕ್ಕೆ ತೆಗೆದುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ಬರೀ ಜನರೇಟ್ ಮಾಡಿದರೆ ಏನೂ ಆಗುವುದಿಲ್ಲ, ವಿದೇಶಿ ಜನ ಬರುತ್ತಿದ್ದಾರೆ. ನಮ್ಮ ಶಕ್ತಿಗೆ ಮೀರಿ ಅವರಿಗೆ ಹಣ ಕೊಡುವುದಾದರೆ, ಅದಕ್ಕೆ ನಾವು ಒಪ್ಪುವುದಿಲ್ಲ, ದೇಶದ ಒಳಗಡೆ ಇರತಕ್ಕಂಥವರೂ ಬಹಳ ಜನ ಬಂದಿದ್ದಾರೆ. ಅವರಿಗಿಂತ ಹೆಚ್ಚು ಆಕರ್ಷಕ ಆಫರ್ಸ್ ಎಲ್ಲಾ ಮಾಡಿದ್ದಾರೆ. ಇವರು ಜವಾಬ್ದಾರಿಯನ್ನೇ ತೆಗೆದುಕೊಳ್ಳುವುದಿಲ್ಲ, ಅದಕ್ಕೋಸ್ಕರ ಇನ್ನು ಎರಡು ವರ್ಷದೊಳಗೆ ಇಟ್ಟು ಸಾವಿರ ಮೆಗಾವ್ಯಾಟ್ ಉತ್ಪತ್ತಿ ಮಾಡುತ್ತೇವೆಂದು ಹೇಳುವುದಿಲ್ಲ, ನಾನು ಈಗ ಏನನ್ನೂ ಹೇಳುವುದಿಲ್ಲ, As on hand, we can increase only 210 M.Ws of power from Raichur Fourth. This is as on today.

ಇನ್ನು ಖಾಡ್ರಾ, ಕೊಡಸಳ್ಳಿ, ಮತ್ತು ಗೇರುಸೊಪ್ಪೆ ಮೂರು ಹೈಡ್ರೋ ಸ್ಟೇಷನ್ನಳೇನಿವೆ. ಇದರಲ್ಲಿ ಬೇಡ್ತಿ ಇಲ್ಲ, ಕಾಂಟ್ರವರ್ಸಿ ಇರತಕ್ಕ ಬೇಡ್ತಿ, ಬರಪೊಳೆ ಇವುಗಳನ್ನು ಕಟ್ಟುತ್ತೇವೋ ಬಿಡುತ್ತೇವೆಯೋ ಗೊತ್ತಿಲ್ಲ, ಅವೆಲ್ಲಾ ಇನ್ನೂ ಚಳುವಳಿಯಾಗಿ, ಮತ್ತೊಂದು ಆಗಿ ನಿಂತಿವೆ. ಯಾವುದೇ ತೊಂದರೆ ಇಲ್ಲದ ಯೋಜನೆಗಳನ್ನು ನಾವು ಮುಂದೆ ಹೋಗತಕ್ಕ ಯೋಜನೆಗಳನ್ನು ನಾವು ತೆಗೆದುಕೊಂಡು ಹೋಗುತ್ತೇವೆಯೋ ಹೊರತು, ಆರ್ಗ್ಯು ಮಾಡಿಕೊಳ್ಳುತ್ತಾ ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಹೈಡಲ್ನಲ್ಲಿ ಇನ್ನೂ ಮೂರು ಭಾಗ ಇದೆ. ಖಾಡ್ರಾ, ಕೊಡಸಳ್ಳಿ ಮತ್ತು ಗೇರುಸೊಪ್ಪೆ. It will take time. Khadra, we will be able to generate in another two years. Kodasalli will be in another four years. Gerusoppa may take longer time. That will add only. So, it will be

fifty into three = 150.

forty into three = 120

Total 270 M.Ws and 210 M.Ws from Raichur.

ಇಷ್ಟು ಮಾತ್ರ ಇವತ್ತು ನಮಗೆ ಸಾಧ್ಯ ಇರುವುದು. ಹಾಗೆಯೇ ಸಾವಿರ ಮೆಗಾವ್ಯಾಟ್ ಸಾಧ್ಯ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

MR. CHAIRMAN : Your requirement is 20,000 Million Units.

SRI J.H. PATEL : As on today, 15,000 Million Units per year ನಾವು ಜನರೇಟ್ ಮಾಡುತ್ತೇವೆ. 60,000 Million Units per day our requirement

ಸರಾಸರಿ 50-55 ಕೆಳಗಿಳಿಯುತ್ತದೆ, ಒಂದೊಂದು ಸಾರಿ 58-60 ತನಕ ಹೋಗುತ್ತದೆ. ಆದ್ದರಿಂದ ಇದನ್ನು ಸಮಗ್ರವಾಗಿ ನೋಡಿ, ಕೆ.ಇ.ಬಿ. ವರ್ಕರ್ಸ್ ಯೂನಿಯನ್ನವರನ್ನೂ ಕರೆಯಿಸಿ ಮಾತನಾಡಿದ್ದೇವೆ. ಇವತ್ತು ಹಳ್ಳಿಗಾಡಿನ ಜನ ಸಹನೆಯನ್ನು ಕಳೆದುಕೊಂಡಿದ್ದಾರೆ. ಎಲೆಕ್ಟ್ರಿಸಿಟಿ ಎಂದರೆ, ಮುಖದ ಮೇಲೆ ಉಗಿಯುತ್ತಾರೆ. ಅಷ್ಟು ಕೆಟ್ಟ ಸ್ಥಿತಿ ಇದೆ. ವರ್ಕರ್ಸ್ನೂ ನಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಕೆ.ಇ.ಬಿ. ಯೂನಿಯನ್ನಲ್ಲಿ 42 ಸಾವಿರ ಜನ ಇದ್ದಾರೆ, ಅವರೂ ಏನೇನೋ ದೂರುಗಳನ್ನು ಹೇಳಿದ್ದಾರೆ. ಆದ್ದರಿಂದ, ಮಾನ್ಯ ಸಭಾಧ್ಯಕ್ಷರೇ, ಹಿಂದಿನವರು ಏನು ಮಾಡಿದ್ದಾರೋ, ಬಿಟ್ಟಿದ್ದಾರೋ, ಅಂತೂ ಅದರ ಸ್ಥಿತಿ ಗತಿ ಸರಿಯಾಗಿ ಇಟ್ಟಿಲ್ಲ. ಈ ಸ್ಥಿತಿಗತಿಯನ್ನು ನಾವು ಈಗ ಸರಿಪಡಿಸಬೇಕಾಗಿದೆ. ಇದನ್ನು ಸರಿಪಡಿಸುವುದು ತತಕ್ಷಣ ಆಗುವ ಕೆಲಸವಲ್ಲ. ತೆಂಗಿನ ತೋಟ ಬೆಳೆಯುವುದು ಮತ್ತು ಎಲೆಕ್ಟ್ರಿಸಿಟಿ ಉತ್ಪಾದನೆ ಮಾಡುವುದು ಎರಡೂ ಒಂದೇ. ಇವತ್ತು ತೆಂಗಿನ ಸಸಿ ನೆಟ್ಟರೆ, ಇನ್ನು 8 ವರ್ಷಕ್ಕೆ ಫಲಕ್ಕೆ ಬರುತ್ತದೆ. ಈ ಎರಡು ಯಲಹಂಕ ಪ್ರಾಜೆಕ್ಟಿಂದ ಆಡಿಷನಲ್ ಪವರ್ಜನರೇಷನ್ ಹೋಯಿತು. ನಮ್ಮ ಸರ್ಕಾರದ್ದು. ಆದ್ದರಿಂದ, ನಾವು ಯಾವ ಸರ್ಕಾರದ ಮೇಲೂ ಹೇಳುವುದಿಲ್ಲ. ಥರ್ಡ್ ಮತ್ತು ಫೋರ್ತ್ ನಾವು ಮಾಡಿದ್ದೇವೆ. ನಮ್ಮ ಜವಾಬ್ದಾರಿ ಜಾಸ್ತಿ ಇದೆ. ಈಗ ಇಂಡಸ್ಟ್ರೀಯಲಿಸ್ಟ್ ಏನು ಹೇಳುತ್ತಾರೆಂದರೆ, ನೀವು 10 ಪೈಸೆ ಜಾಸ್ತಿ ಮಾಡಿ, ನಾವು ಕೊಡುತ್ತೇವೆ, ಸ್ಟಡಿ ಪವರ್ ಕೊಡಿ, ಓಲ್ಟೇಜ್ ಮೈಟೇನ್ ಮಾಡಿ. ಈ ಎಲ್ಲಾ ಡಿಮ್ಯಾಂಡನ್ನು ನೋಡಿ ನಾವು ರೈತರಿಗೆ ಹೇಳಿದ್ದೇವೆ. ನೀವು ಮೋಟಾರು ಸುಟ್ಟುಕೊಳ್ಳಬೇಡಿ. ಪ್ರತಿ ವಾರ ಒಂದು ಮೋಟಾರು ಸುಟ್ಟುಕೊಂಡು, ಕೆಳಗಿದ್ದ ಸಬ್ಮರ್ಸಿಬಲ್ ಪಂಪ್, ಅದು ಕೆಳಗೇ ಹೋಯಿತು, ಮೇಲಿದ್ದವನು ಮೇಲೆಯೇ ಆದ ಈ ಎಲ್ಲಾ ಇರಿಗ್ಯುಲಾರಿಟೀಸನ್ನು ಸರಿ ಮಾಡಬೇಕಾಗಿದೆ. ನಾವು ಬರೀ ಇನ್ಸ್ಟಲೇಷನ್ ಜಾಸ್ತಿ ಮಾಡಿದೆವು. As on today, three lakh installations increase every year.

ಪ್ರತಿ ವರ್ಷ 50-60 ಸಾವಿರ ಪಂಸೆಟ್ ಜಾಸ್ತಿಯಾಗುತ್ತಿವೆ. ಇನ್ನೂ ಡಿಮ್ಯಾಂಡ್ ಇದೆ. Actually, demand for 600 M.Ws of power is increasing every year. If we don't increase even 100 M.Ws, how do you manage? You cannot? ಪ್ರತಿ ಜಿಲ್ಲೆಯಲ್ಲಿ, ಕೆ.ಇ.ಬಿ. ಆಫೀಸರ್ಸ್, ಮತ್ತು ಅಧ್ಯಕ್ಷರಿಗೆ ಏನು ಹೇಳಿದ್ದೇನೆಂದರೆ, ಜಲ್ಲೆಯಲ್ಲಿ ಶಾಸಕರು, ಅವರು ಯಾವುದೇ ಪಕ್ಷದವರಾಗಿರಲಿ, ಅವರಿರುವ ಒಂದು ಅಡ್ವೈಸರಿ ಬೋರ್ಡ್ ಮಾಡಿ. and senior most Officers at the District level ಜಿಲ್ಲೆಗೆ ಭೇಟಿ ಕೊಟ್ಟು, ಅವರು ಪ್ರತಿ ತಿಂಗಳೂ ಸಭೆ ಸೇರಿ, ಅಲ್ಲಿನ ಸಮಸ್ಯೆಗಳೇನು, ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಕಡೆ ಏನೇನಾಗಿದೆ ಎಂಬುದನ್ನು ನೋಡಿ ಒಂದು ರಿಪೋರ್ಟ್ ಕಳುಹಿಸುವುದಕ್ಕೆ, I have decided to constitute that District level body and immediately, ಪವರ್ಕಾಂಟ್ರಾಕ್ಟ್ಗೆ ಸೈನ್ ಮಾಡುವುದಕ್ಕೆ ಬಹಳ ಜನ ಬರುತ್ತಿದ್ದಾರೆ.

8.25 ಪಿ.ಎಂ

ಪವರ್ ಎಂದು ಬಹಳ ಜನ ಬರುತ್ತಿದ್ದಾರೆ. ಆಮೇಲೆ ಇನ್ನೂ ಅಡಿಷನಲ್ ಸ್ಟೀಲ್ ಪ್ಲಾಂಟ್ ಹಾಕುತ್ತೇವೆ ಎಂದು ಬಂದಿದ್ದಾರೆ - 2 ಮಿಲಿಯನ್ ಟನ್ಸ್. ಅದಕ್ಕೆ ಬೇಕಾಗುವಂತಹ 350 ಮೆಗಾವಾಟ್ ಪವರ್ನು ನಾವೇ ಉತ್ಪಾದನೆ ಮಾಡಿಕೊಳ್ಳುತ್ತೇವೆ, ಎಕಸ್ಟಾ ಇದ್ದರೆ ನಿಮಗೆ ಕೊಡುತ್ತೇವೆ. ಆಮೇಲೆ ಆಯಿಲ್ ರಿಫೈನರಿಯವರು ಬಂದಿದ್ದಾರೆ. ನೀವು ನಮಗೇನೂ ದುಡ್ಡು ಕೊಡುವುದು ಬೇಡ. ಆಯಿಲ್ ರಿಫೈನರಿಯಿಂದ ಏನು ಷ್ಯೂಯಲ್ ಆಯಿಲ್ ಬರುತ್ತದೆ, ನಾವು ಆ ಆಯಿಲ್ನು ಬರ್ನ್ ಮಾಡಿ ಎಲೆಕ್ಟ್ರಿಸಿಟ್ಟಿ ಉತ್ಪಾದನೆ ಮಾಡಿಕೊಳ್ಳುತ್ತೇವೆ, ಹೀಗೆ ಎಲ್ಲಾ ಕಡೆಯಿಂದ ಬರುತ್ತಿದ್ದಾರೆ. ಅದನ್ನು ನೋಡಿ ಅದರ ಸ್ಥಿತಿಗತಿ ನೋಡಿ ಅದರ ಏರುಪೇರು ನೋಡಿ ನಾವು ಅದನ್ನು ಕೊಂಡುಕೊಳ್ಳುವಾಗ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಬೇಕಾಗಿದೆ. ಇನ್ನು 10 ವರ್ಷದ ಮೇಲೆ ಇಂಡಸ್ಟ್ರೀಯಲ್ ಡೆವಲಪ್ಮೆಂಟ್ ಏನಾಗುತ್ತದೆ ನಮ್ಮ ಪೊಟೆಂಷಿಯಲ್ ಏನು ಇವೆಲ್ಲಾ ನೋಡಿ ಮಾಡಬೇಕಾಗುತ್ತದೆ. ಈಗ ಬರೇ ಬೆಂಗಳೂರು ಸುತ್ತ ಮುತ್ತ ಇಷ್ಟು ಉದ್ದ ಮೂಗು ಬೆಳೆದಂತೆ ಆಗಬಾರದು. ಹುಬ್ಬಳ್ಳಿ - ಧಾರವಾಡ, ದಾವಣಗೆರೆ, ಹರಿಹರ, ಶಿವಮೊಗ್ಗ, ಭದ್ರಾವತಿ, ಬೆಳಗಾಂ ಏರಿಯಾ ಇವೆಲ್ಲಾ ಕಡೆ ಒಂದೊಂದು ಇಂಡಸ್ಟ್ರೀಯಲ್ ಯೂನಿಟ್ಸಾಡಬೇಕಾಗಿದೆ. ಈ ಮೈಸೂರು ಏರಿಯಾಕ್ಕೆ ಒಂದು ಜನರೇಟಿಂಗ್ ಸ್ಟೇಷನ್ ಇಲ್ಲ, ಅದಕ್ಕೆ ನಾವು ಈಗ ಯೋಚನೆ ಮಾಡುತ್ತಿದ್ದೇವೆ. ಯಾರಾದರೂ ಒಂದು ನೂರು ಮೆಗಾವಾಟ್ಸ್ ಅಥವಾ 150 ಮೆಗಾವಾಟ್ಸ್ ಡೀಜಲ್ ಸೆಟ್ ಹಾಕಿ ಮೈಸೂರು ಏರಿಯಾದಲ್ಲಿ ಎಲೆಕ್ಟ್ರಿಸಿಟಿ ಜನರೇಟ್ ಮಾಡಿದರೆ ಅಲ್ಲಿ ಇಂಡಸ್ಟ್ರೀಯಲ್ ಯೂನಿಟ್ಸ್ ಉಳಿಯುತ್ತವೆ. ನಾವು ಬರೇ ಎಲ್ಲೋ ಒಂದು ಕಡೆ ಜನರೇಷನ್ ಮಾಡುವುದು ಅಲ್ಲ, ರಾಜ್ಯದ ವಿವಿಧ ಭಾಗಗಳಲ್ಲಿ ಜನರೇಟಿಂಗ್ ಸೆಟ್ಸ್ ಹಾಕತಕ್ಕಂಥ ಪ್ರಯತ್ನ ಮಾಡುತ್ತೇವೆ. ಈ ಹಿಂದಿನ 5 ವರ್ಷ ಏನು ನಡೆದಿದೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ನೀವು ಹಿಂದೆ 7 ವರ್ಷಗಳ ಕಾಲ ಅಧಿಕಾರ ಮಾಡಿದಿರಿ. ಅದರ ಬಗ್ಗೆಯೂ ನಾವು ಹೇಳಬೇಕಾಗುತ್ತದೆ. ಸ್ವಲ್ಪ ಅವಕಾಶ ಮಾಡಿಕೊಡಿ. ಏನೇನು ಆಗಿದೆ ಎಂದು ನಾನು ಓದೇ ಹೇಳುತ್ತೇವೆ.

ಶ್ರೀ ಜೆ.ಎಚ್. ಪಟೇಲ್ : ಒಂದು ದಿನ ಅದಕ್ಕೆ ಮೀಸಲಿಟ್ಟು ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡಿರುವುದನ್ನು ಇಷ್ಟು ಮಾಡಿದ್ದಾರೆ ಎಂದು ಹೇಳಿ, ಇಲ್ಲದೇ ಇರುವುದನ್ನು ಮಾಡಿಲ್ಲ ಎಂದು ಹೇಳಿ. ಏನೂ ಮಾಡಿಲ್ಲ ಅಂದರೆ ಏನು ಅರ್ಥ?

ಶ್ರೀ ಜೆ.ಎಚ್. ಪಟೇಲ್ : ಯಾರು ಹೇಳಿದರು?

ಒಬ್ಬ ಮಾನ್ಯ ಸದಸ್ಯರು : ಏನೂ ಮಾಡಿಲ್ಲ ಎಂದು ಅಲ್ಲ, ಬಹಳ ಅನಾಹುತ ಮಾಡಿದ್ದಾರೆಂದು ಹೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನಾಹುತ ಮಾಡಿದ್ದರೆ ಏನು ಶಿಕ್ಷೆ ಕೊಡಬೇಕೋ ಕೊಡಿ. ಒಳ್ಳೆಯದು ಮಾಡಿದ್ದನ್ನೂ ಸಹ ಹೇಳಬೇಕಾಗುತ್ತದೆ.

ಶ್ರೀ ಜೆ.ಎಚ್. ಪಟೇಲ್ : ಒಳ್ಳೆಯದು ಮಾಡಿದ್ದನ್ನು ಹೇಳುತ್ತೇನೆ. ಕೆಟ್ಟಿದ್ದು ಮಾಡಿದ್ದನ್ನು ಹೇಳುತ್ತೇನೆ. ಎಲ್ಲಿ ತಪ್ಪಾಗಿದೆ ಎನ್ನುವುದನ್ನು ಹೇಳುತ್ತೇನೆ. ತಪ್ಪಾಗಿದ್ದರೆ ಒಪ್ಪಿಕೊಳ್ಳುತ್ತೀರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಪ್ಪಾಗಿದ್ದರೆ ನಾವೂ ಒಪ್ಪಿಕೊಳ್ಳಬೇಕು. ನೀವೂ ಒಪ್ಪಿಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು : ಒಟ್ಟಾರೆ ರಾಜ್ಯದ ಜನತೆಯ ಗ್ರಹಚಾರ ನೆಟ್ಟಗೆ ಇಲ್ಲ.

ಶ್ರೀ ಜೆ.ಎಚ್. ಪಟೇಲ್ : ಗ್ರಹಚಾರ ನೆಟ್ಟಗೆ ಇಲ್ಲ ಎಂದು ನಾವು ಪಂಚಾಂಗ ನೋಡುವ ಹಾಗೆ ಇಲ್ಲ, ಯಾವುದೇ ಗ್ರಹಚಾರ ಇದ್ದರೂ ಹೋಗಬೇಕಾಗುತ್ತದೆ. ಕತ್ತಲು ಇದ್ದರೂ ಹೋಗಬೇಕು. ಮುಂದೆ ಬೆಳಕಿನ ಕಡೆ ಹೋಗಲಿ ಎಂದು ಹೋಗಬೇಕಾಗಿದೆ ವಿನಹಃ ಕತ್ತಲಾಗಿದೆ ಎಂದು ಇಲ್ಲೇ ಕುಳಿತುಕೊಳ್ಳಬೇಕಾಗಿಲ್ಲ, ಅದು ಬೆಳಕಿನ ಪ್ರಶ್ನೆ ಬೆಳಕಾಗಬೇಕು ಅಷ್ಟೆ ಅದಕ್ಕೆ ಪ್ರಯತ್ನ ಮಾಡೋಣ. ಇನ್ನು ವಸೂಲಿ ಬಗ್ಗೆ ಕೆಲವರು ಇಂಡಸ್ಟ್ರೀಗಳವರು ಕೋರ್ಟಿಗೆ ಹೋಗಿದ್ದಾರೆ. ಇನ್ನು ಕೆಲವು ರಿಟ್‌ನ್ನು ಆಫ್ ಆಗಿದ್ದಾವೆ. ಎಲ್ಲಿ ತಪ್ಪಾಗಿದೆ ಎನ್ನುವುದನ್ನು ಹೇಳಲು ಮುಂದೆ ಹಲವಾರು ಸಂದರ್ಭಗಳು ಬರುತ್ತವೆ, ಆಗ ಹೇಳುತ್ತೇನೆ.

ಚೇರ್ಮನ್ : ತಾವು ನೆಗೋಷಿಯೇಟ್ ಮಾಡಿ ಫೈನಲೈಸ್ ಮಾಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಆಂಧ್ರದವರು ಈ ರೀತಿ ಮಿಸ್‌ಯ್ಯೂಸ್ ಮಾಡುತ್ತಿದ್ದಾರಲ್ಲಾ ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜೆ.ಎಚ್. ಪಟೇಲ್ : ಆ ಸರ್ಕಾರದೊಡನೆ ನಾವು ಮಾತನಾಡುತ್ತಿದ್ದೇವೆ. ನಾನೂ ಸಹ ಹೈದ್ರಾಬಾದ್ಗೆ ಹೋಗಿ ಕಂಡು ಮಾತನಾಡತಕ್ಕಂಥ ವಿಚಾರ ಮಾಡಿದ್ದೇನೆ. ಸಮಯ, ಬಂದಾಗ ಹೊಸ ಹೊಸ ವಿಚಾರ ಏನೇ ಬಂದರೂ ಸದನಕ್ಕೆ ತಿಳಿಸುತ್ತೇನೆ.

ಅಧ್ಯಕ್ಷರು : ಸಮಯ ಸಾಕಷ್ಟು ಆಗಿದೆ. ಆದ್ದರಿಂದ ಸಭೆಯನ್ನು ಈಗ ಮುಂದೂಡಿ, ನಾಳೆ ಬೆಳಿಗ್ಗೆ 9-30 ಗಂಟೆಗೆ ಸಭೆ ಸೇರುವುದು.

(ಸದನವು ಸಂಜೆ 8-30 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 31-12-94ರಂದು ಬೆಳಿಗ್ಗೆ 9-30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)